ಸಖೀಗೀತ

★

ಅಂಬಿಕಾತನಯದತ್ತ



ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ

ಎಂ.ಎಸ್. ನರಸಿಂಹಯ್ಯ
10/4/06

ಮನೋಹರ ಗ್ರಂಥ ಪ್ರಕಾಶನ ಸಮಿತಿಯು

ಹೊಸ ಬಿಡಿಮುತ್ತು ೧

ಸಖೀಗೀತ

ಅಂಬಿಕಾತನಯ ದತ್ತ

೧೯೪೦

ಪ್ರಕಾಶಕರು:
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ

ಮುದ್ರಕರು:
ಕೆ. ಜಿ. ರಾಯದುರ್ಗ
ಮೋಹನ ಮುದ್ರಣಾಲಯ
ಧಾರವಾಡ

ಸಂದರ್ಭಸೂಚನೆ

'ಗುರುದೇವ'ನು ಕವೀಂದ್ರ ರವೀಂದ್ರನೆಂದರೆ ಅರ್ಥವು ಗಮ್ಯವಾದೀತು. ಇದು ಗುರುವಿಗೆ ನಮನ. 'ಶಾಂತಿ'ಯಲ್ಲಿ ಸಮಾಧಾನಕ್ಕೆ ಆವ್ಹಾನವಿದೆ. 'ಮಾಯಾಕಿನ್ನರಿ'ಯ ಹಿನ್ನೆಲೆಗೆ ಒಂದು ಕಥೆ ಇದೆ. ಕಾಡಸಿದ್ಧ-ಮರುಳಸಿದ್ಧ ಎಂಬ ಮಹಾತ್ಮರೊಬ್ಬರು ಉತ್ತರ ದಿಗ್ವಿಜಯ ತೀರಿಸಿ ದಕ್ಷಿಣದಲ್ಲಿ ಕರ್ನಾಟಕಕ್ಕೆ ಬಂದರು. ಆಗ ಕೊಲ್ಲಾಪುರದ ಮಾಯೆಯೆಂಬ ಯೋಗಿನಿಯು ಸಾವಿರ ಯೋಗಿಗಳನ್ನು ಸೋಲಿಸಿ ತನ್ನ ಮನೆಯಲ್ಲಿ ಊಳಿಗದಾಳುಗಳನ್ನಾಗಿ ಕೆಲಸಕ್ಕೆ ಹೂಡಿದುದನ್ನು ಕೇಳಿದರು. ಮಾಯೆಯೊಡನೆ ಇವರ ವಾಗ್ವಾದವು ಅನೇಕ ದಿನ ನಡೆದು ಮಾಯೆಯು ಎಲ್ಲ ವಿಷಯದಲ್ಲಿ ಸಿದ್ಧರಿಗೆ ಸೋತಳು. ಅದರಿಂದ ಅವಳು ಕುಪಿತಳಾಗಿ ಮಂತ್ರ-ತಂತ್ರದಿಂದಾ

ದರೂ ಅವರನ್ನು ಗೆಲ್ಲಲು ಹವಣಿಸಿದಳು. ಸಿದ್ಧರು ಮಾಯೆಯನ್ನೆ ಮಂತ್ರಬಲದಿಂದ ಕಿನ್ನರಿಯನ್ನಾಗಿ ಮಾಡಿ ಹೊತ್ತುಕೊಂಡು ಹೊರಟರು. ಮೊದಲಸಲ ಆ ಕಿನ್ನರಿಯನ್ನು ಬಾರಿಸಬೇಕೆಂದಾಗ ಪ್ರಣಯ-ಕುಪಿತ ಮಾನಿನಿಯಂತೆ ಅದು ಸಿಡಿಮಿಡಿಗೊಂಡಿತು, ಶ್ರುತಿಗೊಡಲಿಲ್ಲ; ಆಗ ಸಿದ್ಧರು ಮಾನಿನಿಯನ್ನು ಒಲಿಸಿಕೊಳ್ಳುವಂತೆ ಮಾಯೆಯನ್ನು ಒಲಿಸಿಕೊಳ್ಳಲು, ಗೆಜ್ಜೆ-ಪೈಜಣ ಕಟ್ಟಿದ ಮಾಯೆಯೆ ಕಿನ್ನರಿಯ ಮೈಯಲ್ಲಿ ನಿಂತು ಜಗವು ಬೆರಗಾಗುವಂತೆ ದಿವ್ಯಸಂಗೀತವನ್ನು ಹೊರಸೂಸಿದಳು. 'ತುಂಬಿ ಬಂದಿತ್ತು' ಈ ಪದ್ಯದ ಸಂದರ್ಭ ಹೀಗಿದೆ: ಈ ಹಾಡು ಬಸವಣ್ಣನವರ ಜೀವನದ ಕೊನೆಯ ದಿನಗಳಿಗೆ ಸಂಬಂಧಿಸಿದ "ತಲೆದಂಡ" ಎಂಬ ನಾಟಕದೊಳಗಿನದು. ರಾಯಮುರಾರಿಯ ಕಣ್ಣೆದಿರು ಬಸವಣ್ಣನವರ ಸಮಾಧಿಯ ಕೆಲಸ ನಡೆದಿರುವಾಗ ಮುದುಕ ಜಂಗಮನೊಬ್ಬನು ತನ್ನ ಸ್ವಾನುಭವದ ಈ ಹಾಡನ್ನು ಹೇಳುತ್ತಿರುವನು. ರಾಯಮುರಾರಿಗೆ ಅದು ಬಿಜ್ಜಳ-ಬಸವಣ್ಣನವರ ಚರಿತೆಗೂ ಕಾಲಕ್ಕೂ ಅನ್ವಯಿಸುವದೆಂದು ತೋರುವದು. ಸುತ್ತಲಿದ್ದವರಿಗೂ, ಸಭಿಕರಿಗೂ ಹಾಗೆಯೇ ತೋರುವದು. "ತಲೆದಂಡ"ದ ಕೊನೆಯ ಪದ್ಯವೇ ಇದು. ಇದರೊಳಗಿನ ಮೂರು ನುಡಿಗಳಲ್ಲಿಯೂ ಬರುವ 'ತುಂಬಿ ಬಂದಿತ್ತು' ಎಂಬ ಮಾತಿಗೆ ಒಂದೊಂದು ನುಡಿಯಲ್ಲಿ ಒಂದೊಂದು ಅರ್ಥವಿದೆ. ೧. ತುಂಬಿಕೊಂಡು ಬಂದಿತ್ತು. ೨. ದುಂಬಿ-ಭ್ರಮರವು ಬಂದಿತ್ತು. ೩. ಕಾಲವು ತುಂಬಿ ಬಂದಿತ್ತು. ಹಾಡನ್ನು ಕಿನ್ನರಿಯೊಡನಾಗಲಿ, ಏಕದಾರಿಯೊಡನಾಗಲಿ ಹೇಳಿದರೆ ಸೊಗಸು ಹೆಚ್ಚು. ನಾಟಕದಲ್ಲಿ ಅದು ಹಾಗೆ ಹೇಳಲಾಗುವದು. ನಾಮಸ್ಮರಣೆಯ ಪ್ರಾರಂಭದ ಸುಖವನ್ನು ಕಾಳರಾತ್ರಿಯ ವಿರಹದಲ್ಲಿ 'ಆ ದಿನ ನೆನೆದು' ಹಂಬಲಿಸಿ ಮುಂದಿನ ಪರಿಣಾಮಕ್ಕೆ ಹಾರಯಿಸಿದ್ದಾಗಿದೆ. 'ಕೈ ತಾ ಬಾ' ಎಂಬುದು ಜಗದ ರೂಪ-ರೂಪವನ್ನೂ ರೂಪಿಸುವ ಸೌಂದರ್ಯ-ಶಕ್ತಿಯನ್ನು ಕುರಿತು ಇದೆ. 'ಮನಸುಖರಾಯನ

ಮಗಳು' ಬಾಹ್ಯ-ಸೌಂದರ್ಯಕ್ಕೆ ಮನಸೋತಿದ್ದಾಳೆ, ಒಳ-ಸೌಂದರ್ಯವನ್ನು ಕಾಣದಾಗಿದ್ದಾಳೆ. ಬಾಹ್ಯದ ಹೊಟ್ಟೆಯಲ್ಲೂ ಆಂತರ್ಯದ ಗುಟ್ಟು ಇರುವದನ್ನೂ ಮನಸ್ಸು ಕಾಣಬೇಕು. 'ಸರ್ವಂ ಖಲ್ವಿದಂ ಬ್ರಹ್ಮ'. 'ಕವಿಕಲ್ಪನೆ'ಯು ಸೀರಿಗಿಂತ ಶಾಂತ, ನಿದ್ರೆಗಿಂತ ಮೋಹಕವಾಗಿಲ್ಲವೆ? ಛಂದೋ-ಗತಿಯನ್ನು ಕಂಡು ಈ ಕವನ ಹೇಳಬೇಕು. 'ನಿದ್ದೆ'ಯ ಸಂಹಾರಕ-ಸ್ವರೂಪದ ನಾಲ್ಕು ನೆಲೆಗಳನ್ನು ಇಲ್ಲಿ ಗುರುತಿಸಿದ್ದಾಗಿದೆ. ಬೇಸತ್ತ ಕಲ್ಪನೆಯು, ಆಟವಾಡಿ ದಣಿದ ಹುಡುಗ ತಾಯಿ-ಮಡಲಿಗೆ ಬರುವಂತೆ ರಾತ್ರಿಗೆ ಮೊರೆಹೋಗುವದಲ್ಲವೆ? ಜೋಳದ ಕಡ್ಡಿ(ದಂಟು)ಗೆ ಸುತ್ತಿರುವ ಸೊಪ್ಪೆಯನ್ನು ಚಿಕ್ಕಂದಿನಲ್ಲಿ ಊದಿ ಆನಂದಿಸಿದವರು 'ರನದಿ'ಯ ಅರ್ಥ-ವನ್ನು ಸ್ವಾರಸ್ಯಪೂರ್ಣವಾಗಿ ಕಾಣಬಹುದು. 'ಜೇನು ಹುಟ್ಟು' 'ಆನಂದವೇ' ಈ ಎರಡು ಕವನಗಳಲ್ಲಿ ಹರ್ಷಾನುಭವದ ಎರಡು ಪರಿಗಳ ಎರಡು ಭಾವಲಹರಿಗಳಿವೆ. ದಿವಂಗತ ಸಕ್ಕರಿ ಬಾಳಾಚಾರ್ಯರು ಕವಿಗಳಿರುವಂತೆ ಕೀರ್ತನಕಾರರೂ ಆಗಿದ್ದರು. 'ರಕ್ಷಿಸು ಕರ್ನಾಟಕ ದೇವಿ' ಎಂಬ ಅವರ ಪದ್ಯ ಕೇಳಿದವರಿಗೆ ಅವರ ಕನ್ನಡ ಭಕ್ತಿ ತಿಳಿದಿದೆ. ಅವರು ದಿವಂಗತರಾದಾಗ್ಗೆ ಬರೆದ ಪದ್ಯಗಳಿವು. ದಾರಿದ್ರ್ಯದ ದುರ್ದೈವವನ್ನೂ ಸಮಾಜದ ಕುರುಡುತನವನ್ನೂ ಅನುಭವಿಸಿದವರು 'ತಿರುಕ'ನ ಹೃದಯ ತಿಳಿಯಬಲ್ಲರು. ಕಾವ್ಯ-'ಪರಾಗ'ವು ರಸಿಕ ಭ್ರಮರನಿಗಾಗಿಯೇ ಕಾಯ್ದುಕೊಂಡಿದೆ. 'ವಸಂತಮುಖ'ವು ವಸಂತ ಪ್ರಾರಂಭವನ್ನು ವರ್ಣಿಸುವದು. ಹೂತಂಥ ಹುಣಿಸೆಮರವನ್ನು ನೋಡಿ ಊಹೆಗೆ ಬಂದ ಚಿತ್ರದ ಸಾಲೊಂದು ಮುಂದಿನ ಪದ್ಯದಲ್ಲಿ ವರ್ಣಿತವಾಗಿದೆ. ಚಿತ್ರವು ಸಂಚಾರಾಂತ್ಯದಲ್ಲಿ ತಾನೆ ಶಾಂತಿಯ ಸ್ಥಾಯಿಯನ್ನು ಮುಟ್ಟಿದೆ. 'ಚಿತ್ರಾ' ನಕ್ಷತ್ರದ ಮಳೆಯ ನಂತರ ಸಂಜೆಗೆ ತೋರಿದ 'ಸಾಧನಕೇರಿ'ಯ ಸೊಬಗನ್ನು 'ಕುರುಡು ಚಿತ್ತಿಯ ಮಳೆ' ಯಲ್ಲಿ ಸೂಚಿಸಿದ್ದಾಗಿದೆ. ಮುಂದಿನ ಎರಡು ಪದ್ಯಗಳು ನನ್ನ ಒಂದು

ಅಲಿಖಿತ ನಾಟಕದೊಳಗಿನವು. ಕಲ್ಯಾಣನಗರದ ಕಲ್ಯಾಣಿಯು ಮುದ್ದಯ್ಯನೆಂಬ ಜಂಗಮನಿಗೆ ಮನಸೋತು ಅವನ ಬೆಂಬತ್ತಿ ಬರಲು ಅಪ್ಪಣೆ ಕೇಳಿದಾಗ 'ಮನೆಗೆ ಹೋಗವ್ವಾ' ಎಂದು ಅವನು ಹೇಳುವನು. ಆಕೆಯ ಪ್ರಶ್ನೆ ನನ್ನ 'ಗರಿ'ಯಲ್ಲಿ 'ರಸಿಕಾ ಪೇಳೊ' ಎಂಬ ಕವನದಲ್ಲಿದೆ. 'ರಾಧೆಯ ಪಾಡು' ಕಲ್ಯಾಣಿ ಇನ್ನೊಂದು ಸಂದರ್ಭದಲ್ಲಿ ಹೇಳಿದ ಹಾಡು. 'ಹುಬ್ಬಳ್ಳಿಯಾಂವಾ' ಎಂಬ ಲಾವಣಿಯು ನಾನು ಬರೆಯಬಹುದೆಂದು ಆಶಿಸಿರುವ ಇನ್ನೊಂದು ನಾಟಕದ ಭಾಗ. ಪ್ರಣಯಭಂಗದಿಂದ ಹುಚ್ಚು ಹಿಡಿದ ಸೂಳೆಯೊಬ್ಬಳು ತನ್ನ ಉನ್ಮಾದದಲ್ಲಿ ಈ ಹಾಡನ್ನು ಹೇಳುತ್ತಾಳೆ—ಎಂದು ಸಂದರ್ಭವಿದೆ. 'ನಲ್ಲನಲ್ಲೆಯರ ಲಲ್ಲೆ'ಯು ಅವರ ಪರಸ್ಪರ-ಪ್ರಶಂಸಕ-ಚಾತುರ್ಯದ ಜಾಣ್ಣುಡಿಗಳ ಮಾಲೆ. ಗೋಪೀಕೃಷ್ಣನಿಗೆ ಪುರಾಣದಲ್ಲಿ ಜಾರತೆಯ ಕೋಡು ಮೂಡಿಸಿದ 'ಪುಟ್ಟ ವಧವೆ'ಯ ಬಗ್ಗೆ ನಾನೇನು ಹೇಳಲಿ? ಆ ಮೂಕ ಅಭಾಗಿನಿಗೆ ದೇವರೇ ಗತಿ! ಪಕ್ಷಿ-ಪಶು-ಮಾನವ ಎಲ್ಲರನ್ನೂ ಜೀವವೆಂದು ಬಗೆಯದೆ ಜಡಾನ್ನವನ್ನಾಗಿ ಮಾಡಿ ಹಿಂಸೆಗೊಳಿಸುವ ಯುಗಯುಗದ ಗೋಳನ್ನು 'ಚಿಗರಿಗಂಗಳ ಚೆಲುವೆ'—ಭೂಮಿತಾಯಿ—ತಾನೂ ಕೂಡ 'ಒಡವೆ ಅಲ್ಲ, ಮಗನೇ! ನಾನೂ ಉಸಿರಿದ್ದೊಡಲು'—ಪೃಥ್ವಿಯು ಜೀವಕೋಟಿಯ ತಾಯಿ, ಅದನ್ನು ಹಿಗ್ಗಾ-ಮುಗ್ಗಾ ಎಳೆದು, ಹರಿದು ಹಂಚಬಾರದಾಗಿ — ಹೇಳುತ್ತಾಳೆ. 'ಬೈರಾಗಿ'ಯ ಹಾಡಿನಲ್ಲಿ ಬಂದ ತತ್ತ್ವವು ಒಪ್ಪಿಯಾಗದ ಮಾನವಕುಲದ ಒಳದನಿ. 'ಧಾರವಾಡದ ತಾಯಿ' ದುರ್ಗೆಗೆ ನಮನದಿಂದ ಈ ಬಿಡಿ ಕವನಗಳು ಕೊನೆಗಾಣುವವು.

ಈ ಸಂದರ್ಭಸೂಚನೆಯಿಂದ ಕವನ-ಭಾವ-ಗ್ರಹಣವು ಒಂದಿಷ್ಟಾದರೂ ಸುಲಭವಾಗುವದೆಂದು ನಾನು ನಂಬುತ್ತೇನೆ.

ಅಂಬಿಕಾತನಯ ದತ್ತ



ಸಖೀಗೀತ

ಪರಿವಿಡಿ

ಗುರುದೇವ

ನುಡಿದು ಬೇಸತ್ತಾಗ। ದುಡಿದುಡಿದು ಸತ್ತಾಗ
ಜನಕ ಹಿಗ್ಗಿನ ಹಾಡು ನೀಡಾಂವಾ
ನಿನ್ಹಾಂಗ ಆಡಾಕ। ನಿನ್ಹಾಂಗ ಹಾಡಾಕ
ಪಡೆದು ಬಂದವ ಬೇಕೊ ಗುರುದೇವಾ

ಮಕ್ಕಳಾಗ್ಯಾಡೀದಿ। ಹಕ್ಕ್ಯಾಗಿ ಹಾಡೀದಿ
ಚಿಕ್ಕ್ಯಾಗಿ ನೋಡೀದಿ ಗುರುದೇವಾ
ಬಳ್ಳ್ಯಾಗ ಕುಣಿದೀದಿ। ಬೆಳಕಿನ್ಯಾಗ ತಣಿದೀದಿ
ಹೂವಾಗಿ ಅರಳೀದಿ ಗುರುದೇವಾ

ಬೆಳಿಯಾಗೀಸಾಡೀದಿ। ಗಾಳ್ಯಾಗ ಬೀಸಾಡೀದಿ
ಮಳಿಯಾಗ ಕೂಸಾಡೀದಿ ಗುರುದೇವಾ
ಬಿಸಿಲ್ಹಣ್ಣು ಉಂಡೀದಿ। ಬೆಳದಿಂಗಳ ಕಂಡೀದಿ
ಚಳಿಮುದ್ದು ಕೊಂಡೀದಿ ಗುರುದೇವಾ

ಮೂಡಲಕ ಮೂಡೀದಿ। ಪಡುವಲಕ ಓಡೀದಿ
ದಿಕ್ಕೆಲ್ಲ ಕೂಡೀದಿ ಗುರುದೇವಾ
ಹಾಡಿ ಹಣ್ಣಾದಿ ನೀ। ಜಗದ ಕಣ್ಣಾದಿ ನೀ
ದುಡಿದು ಸಣ್ಣಾದಿ ನೀ ಗುರುದೇವಾ

ಶಾಂತಿ

ಏ! ಬಾ, ಬಾರೆ ಗುಣವಂತಿ ॥ ಪಲ್ಲ ॥
ತಳಕಿತ್ತಿ ಓಡೆಲೆ। ತಳವೂರಿದ ಚಿಂತಿ
ನಿಲ್ಲಲೆ ಚಿರಶಾಂತಿ ॥ ಅ. ಪ. ॥

ತಂಬೂರಿ ತುಂಬೆಲ್ಲಾ
ಕೇಸರ ಬಾಸರ
ಬೇಸರ ಬಂದೈತಿ

ಸಖೀಗೀತ

ಆ ಸರ ಈ ಸರ
ತಲೆಗೊಂದು ತರತರ
ಬಾಯ್ ಬಿಡತಾವ ತಂತಿ

ಎದಿ-ಗುಡಿ ಉಡುಗಿತ್ತ
ಮನ ಮಡಿ ಮಾಡಿತ್ತ
ಕಣ್ ಕದಾ ಮುಚ್ಚೈತಿ
ಬಿರುಗಾಳಿ ಬೀಸಿತ್ತ
ಬಾಗಿಲ ತೆರೆದಿತ್ತ
ನೆರೆದಿತ್ತ ಹುಡಿ ಸಂತಿ

ಕರೆದಾರಿ ನಾಲಿಗಿ
ನಿನ್ನದೆ ಹಾಲಿಗಿ
ಬಾಯಾಸೆ ಬಿಡತೈತಿ
ಬಾಯಾರಿ ಕಾಯಲೊ
ಹಸಿವೇರಿ ಸಾಯಲೊ
ಹೇಳೊಮ್ಮೆ, ಏನಂತಿ ?

ಇದ್ದದ್ದು ಬರಿ-ದಾರಿ
ಬುದ್ದೀದು ಉರಿ-ದಾರಿ
ನಿದ್ದ್ಯೊಂದು ಹರದಾರಿ
ದಣುವಿನ ವ್ಯಾಲ್ದಣಿವು
ಜನುಮದ್ದು ಬಿತ್ತೈಣವು
ಹೋದಲ್ಲೆ ನೀ ನಿಂತಿ

ಮಾಯಾಕಿನ್ನರಿ

ಸುರುಳು ಮಾಡಾಕ ಹೋಗಿ ಮರುಳಸಿದ್ಧನ ನಾರಿ
ಮರುಳಾಽಗ್ಯಾಳ ಜಂಗಮಯ್ಯ್ಯಗ
ಕಿನ್ನರಿ ಆಗ್ಯಾಳ ಕೈಯ್ಯ್ಯಾಗ
ನುಡಿದಾಳ ಬಂದ್ಹಾಂಗ ಮೈಯ್ಯ್ಯಾಗ ॥ ಪಲ್ಲ ॥

ಆಡುತಾಡುತ ಬಂದು ಸಿಂಗಾರಸೊಳ್ಳೀ ಹಾಂಗ
ಹಾಡಿಲೆ ಕಿವಿಗಲ್ಲ ಕಡಿದ್ಯೇನ
ಹಾದಿ ತಪ್ಪಿಸಿಕೊಂಡ ಗುಂಗಿಯು ಹುಳಧಾಂಗ
ಗುಣುಗುಣು ಗೊಣಗುಟ್ಟಿ ನುಡಿದ್ಯೇನ
ತನ್ನೊಡೆಯನ ಕೂಡ ಚಿನ್ನಾಟ ನಡಿಸೀದ
ಕುನ್ನಿ ಕುಞ್‍ಗುಡುವಾಟ ಹಿಡಿದ್ಯೇನ
ಮುಟ್ಟಿದರ ಮುರುಕುವ ವಯ್ಯಾರ ಕಲಿತೆಲ್ಲಿ
ಸುಳ್ಳಽನ ಸಿಡಿಮಿಡಿ ಸಿಡಿದ್ಯೇನ

ಎದಿಗೊತ್ತಿ ಹಿಡಿದರು ಮುತ್ತಿಟ್ಟು ಮತ್ತಿಷ್ಟು
ಮುಳುಮುಳು ಸುಮ್ಮನೆ ಅತ್ತೇನ
ಕೈಯಾಡಿಸಿದಂತೆ ಮೈಕದ್ದು ನಡುಗುವಿ
ಇದು ಹೊಸ ಗಮಕದ ಗತ್ತೇನ
ಮೊದಲ ಬೆಟ್ಟಿಗೆ ಬಂದ ಮಳ್ಹೆಣ್ಣು ಮಾಡಿಧಾಂಗ
ತುಟಿಕಚ್ಚಿ ತಡವರಿಸಿ ತಡದೇನ
ತಂತ್ಯಲ್ಲ; ಜೀವದ ತಂತು ನೀ. ಅಂತsನ
ಶ್ರುತಿ ಹಿಡಿದು ಜತಿ ಹಿಡಿದು ನಡದೇನ

ಕಂಕಣ ಕಾಲುಂಗರಕ ಮೆಲ್ಲುಸಿರ-ಛಂದಕ
ಕುಣಿತಾನ ನಡೆಧಾಂಗ ಕಾಲಾsಗ
ಕರಗಿ ಬಾ, ಅರಗಿ ಬಾ, ಎರಗಿ ಬಾ, ಸಣ್ಣಾಗಿ
ಸಕ್ಕರಿ ಬೆರೆಧಾಂಗ ಹಾಲಾsಗ
ನಂಬಿಸಿ ರಂಬಿಸಿ ಚುಂಬಿಸಿ ಎದೆಗೊಂಬಿ
ಬಿಂಬೀಸಿ ಎದೆಯೊಳಗ ಅಂಧಾಂsಗ
ಝಣಣ ಮಿಡಿದಾವ ತಂತಿ; ಗೆಜ್ಜಿಪೈಜಣ ಕಟ್ಟಿ
ಮಾಯೆಯೆ ಮೈಯೊಳಗ ಬಂಧಾಂsಗ

ಅಗಲಿದ ಇನಿಯನ ಫಕ್ಕನೆ ನೋಡುತ
ಬಸಿರ ಹೂ ಕುಲುಕುಲು ನಕ್ಕ್ಹಾಂಗ
ನಲ್ಲ ಮುಟ್ಟಿದ ಗಲ್ಲ, ನಲ್ಲೆಯ ಮೈಯೆಲ್ಲ
ಹಿಗ್ಗಿನ ಮುಳ್ಳಿಗೆ ಸಿಕ್ಕ್ಹಾಂಗ .
ಜುಮ್‌ಜುಮು ರುಮುಜುಮು ಗುಂಗುಣು ದುಮುದುಮು
ನಾದದ ನದಿಯೊಂದು ನಡೆಧಾಂಗ
ಗಲ್ಲಗಲ್ಲಕೆ ಹಚ್ಚಿ ನಲ್ಲನಲ್ಲೆಯರಿರುಳು
ಗುಜುಗುಜು ಗುಲುಗುಲು ನುಡಿಧಾಂಗ

ಸಂಜೀಯ ಮುಗಿಲಾಗ ರೊಞ್‌ಜಿಲ್ಲ ಪಟವೊಂದು
        ಗಾಳಿ-ಸುಳಿಗೆ ಶ್ರುತಿ ಹಿಡಿಧಾಂಗ
ಗಗನಸಂಚಾರದ ನಾರದನ ವೀಣೆಯು
        ಹಾಡೀನ ತೆರಿತೆರಿ ಒಡಿಧಾಂಗ
ಮಂಕಾಗಿ ಮೂಕಾದ ಮನದ ಮಿಡುಕಾಟದ
        ಮೊಗ್ಗಿಗೆ ಬಾಯಿಲ್ಲಿ ಒಡಿಧಾಂಗ
ಹೆಣ್ಗಂಡು ಜೇನ್ನೊಣ ಮುದ್ದಾಡಿ ಕಚ್ಚಾಡಿ
        ಹೂಜೇನ ಹನಿಹನಿ ಕುಡಿಧಾಂಗ

ಆತನೀತಸವಂತ ಯಾತನದ ಯಾತನೆಯು
        ಯಾತ ಕಿರುಗುಟ್ಟೋದು ಸಿಂಧಾಂಗ
ನಾನೀನ ಸುಡಿ ಸುಂಗಿ ತಾನೀನ ತಾನೆ ತಾ
            ತಾನಾಗಿ ತನನಽನ ಬಂಧಾಂಗ
ರಂಗೊಂದು ದಂಗೊಂದು ಗುಂಗೊಂದು ಒಂದಕ್ಕೊಂದು
        ಹತ್ತಾಗಿ ಜತ್ತಾಗಿ ಸುಳಿಧಾಂಗ
ದಣಿದ ಜೀವದ ವ್ಯಾಲೆ ಜೇನಿನ ಸುರಿಮಳಿ
        ಜೇಂಗುಟ್ಟಿ ಹನಿಹನಿ ಇಳಿಧಾಂಗ

ಪ್ರಕೃತಿ ಪುರುಷಗೆ ಸೋತು ಪ್ರಾಣಂದ್ದಜಿಯೆ ನೂತು
        ಅನುಭವದ ಕಿಫಿಮಾತು ಆಧಾಂಗ
ಹಾಸಾದ ಹಾಡೀಗೆ ಹೊಕ್ಕಾತು ಕಿನ್ನರಿ
        ನೆಯ್ಗಿಯೊಳಗ ನೂಲು ಹೋಧಾಂಗ
ಜೀವದ ರಸ ಹಿಂಡಿ ತುಂತೂರು ಮಳೆಯಾಗಿ
        ತಂತಿಯು ತುಂಬೆಲ್ಲ ಸಿಡಿಧಾಂಗ
ಮುರುಳ ಸಿದ್ಧನ ಕೈಯ್ಯ ಕಿನ್ನರಿಯಾಗಿ ಸಿಕ್ಕ
        ಮಾಯೆಯು ಮೈಗೆ ಮೈ ಸುಡಿಧಾಂಗ

ತುಂಬಿ ಬಂದಿತ್ತು

ತುಮ್ ತುಮ್ ತುಮ್‌ತುಮ್ ತುಮ್‌ತುಮ್ ತುಮ್ ತುಮ್
ತುಂಬಿ ಬಂದಿತ್ತs ತಂಗೀ
ತುಂಬಿ ಬಂದಿತ್ತು ॥ ಪಲ್ಲ ॥

ಬೆಳಕಿಗಿಂತ ಬೆಳ್ಳಗೆ ಇತ್ತ
ಗಾಳಿಗಿಂತ ತೆಳ್ಳಗೆ ಇತ್ತ
ಜಡಿಯಿಂದಿಳಿದ ಗಂಗಿ ಹಾಂಗ
ಚಂಗನೆ ನೆಗೆದಿತ್ತ
ಮೈಯೊಳಗಿರುವ ಮೂಲಿಮೂಲಿಗೂ
ಮೂಡಿ ಬಂದಿತ್ತ
ಅಡಿಮುಡಿಗೂಡಿ ನಡುವಂತೆಲ್ಲಾ
ಮುಳಿಗಿಸಿ ಬಿಟ್ಟಿತ್ತs ತಂಗೀ
ತುಂಬಿ ಬಂದಿತ್ತು ॥ ತುಮ್ ತುಮ್

ಹೂವಿಗಿರುವ ಕಂಪು ಇತ್ತ
ಹಾಡಿಗಿರುವ ಇಂಪು ಇತ್ತ
ಜೀವದ ಮಾತು ಕಟ್ಟಿಧಾಂಗ
ಎದ್ಯಾಗ ನಟ್ಟಿತ್ತ
ಮರ್ಮದ ಮಾತು ಆಡಿದ್ಹಾಂಗ
ಮರ್ಮಕ ಮುಟ್ಟಿತ್ತ
ಬೆಳಕಿಗೆ ಮರಳಿ ಕಮಲವರಳಿ
ಜೇನ ಬಿಟ್ಟಿತ್ತs ತಂಗೀ
ತುಂಬಿ ಬಂದಿತ್ತು ॥ ತುಮ್‌ತುಮ್

ಕಾಲದ್ಹಾಂಗ ಕಪ್ಪಗಿತ್ತ
ಸಾವಿನ್ಹಾಂಗ ತೆಪ್ಪಗಿತ್ತ
ಹದ್ದು ಬಂದು ಹಾವಿನ ಮ್ಯಾಲೆ
ಎರಗಿದಂತಿತ್ತ
ಇರುಳು ಮಬ್ಬಿನಾಗ ಹಗಲಿನ ಬೆಳಕು
ಕರಗಿದಂತಿತ್ತ
ಗುಂಗು ಹಿಡಿದು ತಂಗಿದಾಗ
ತುಂಬಿ ನಿಂತಿತ್ತs ಈಗ
ತುಳಿಕಿ ಹೋಗಿತ್ತ
ತಂಗೀ ತುಂಬಿ ಬಂದಿತ್ತು ॥ ತುಮ್‌ತುಮ್

ಆ ದಿನ ನೆನೆದು

ಭಾಸಹಾಸಗಳಲ್ಲಿ ಜೀವ ತೇಲುತ್ತಿರಲು
ನಿನ್ನ ನಾಮವು ಬಂತು ಸಿಡಿಲು ಸಿಡಿದಂತೆ
ಹೇಸಿಗೆಯು ಹೂವ ಮೂಸಿಡುವ ತುಂಬಿಗೆ ದೂರ-
ದಲ್ಲಿರುವ ಸಂದನದ ಕಂಪು ಬಡಿದಂತೆ

ಪ್ರೇಮಸಂಕೇತಗಳನೆಂದು ಧಾಳಾಧೂಳಿ-
ಯಿಂದ ಕುಣಿದೆನು ನಾನು ಪ್ರಾತ್ಯಶುಕದಂತೆ
ಮಾಮರನ ಚಿಗುರನ್ನು ಕನಸಿನಲ್ಲಿಯೆ ಕಂಡು
ಕಣ್ಮುಚ್ಚಿ ಕುಕಿಲುತಿಹ ತರುಣ ಪಿಕದಂತೆ

ಹಿರಿ ಬೆಳಕು ಬರುತಿಹುದು, ನರುಗಂಪ ತರುತಿಹುದು
ಇನ್ನು ಇಂದಿಗು ಗುಪ್ತಗಂಗೆ ಹರಿದಂತೆ
ಅರಿತಿಲ್ಲ ಆ ನೇಹ, ಮರೆತಿಲ್ಲ ಆ ನೆನಹು,
ಏಕೆಯಿರುವದೊ ಮೊದಲಿಗಿದ್ದಕಿದ್ದಂತೆ

'ಒಂದೆ ಒಂದೇ' ಎಂದು ರಸಸಿದ್ಧಿಗಾಗೆಂದು
ಸಿದ್ಧನಾಗಾರ್ಜುನನು ತಿರುಗಿದಂತೆ
'ಒಂದೆ ಮಾತಾಡು ಪತಿ' ಎಂದು ವಿರಹಿಣಿ ತನ್ನ
ಮೃತ್ಯುಶಯ್ಯೆಯ ಮೇಲೆ ಮರುಗಿದಂತೆ

ಇಂದು ಎನ್ನುತ್ತಿರುವೆ ಗುಟುಕು ಕೊಡು ತೊಟಕು ಕೊಡು,
ಆತ್ಮಘಾತಕಿಯಾದ ಕಾಡಬೇಗೆ
ಸಂದಿಸೈ, ಭಕ್ತಿಯಲಿ ಸಂಧಿಸೈ, ಕುಡಿವೆ ನಾ
ಹಸಿದು ಬಂದವ ಹಾಲು ಕುಡಿದ ಹಾಗೆ

ಬಾ ಕೈ ತಾ

ಮನಸಿನಲ್ಲಿ ಹೊಳೆದವನೆ
ಕನಸಿನಲ್ಲಿ ಬೆಳೆದವನೆ
ಜೀವನವನೆ ತೊಳೆದವನೆ
ಎಲ್ಲಿರುವೆ ಬಾ!
ಚೆಲುವಿನಲ್ಲಿ ಮಾಗಿರುವೆ
ಒಲವಿನಲ್ಲಿ ಬಾಗಿರುವೆ
ಜಗದ ರೂಪವಾಗಿರುವೆ
ಕೈಗೆ ಕೈಯ ತಾ!
ಹಳ್ಳ ಹೊಳೆಗೆ ನೂಗಿದಾಗ
ಹೂ ಹೂವಿಗೆ ತಾಗಿದಾಗ
ಹಕ್ಕಿ ಕೆರಳಿ ಕೂಗಿದಾಗ
ಮೂಡಿದವನೆ ಬಾ!
ಗಂಡು-ಹೆಣ್ಣು ಕೂಡಿದಾಗ
ತಾಯಿ ಕೂಸ ನೋಡಿದಾಗ
ಜೀವ ಸೆಲೆಯು ತೋಡಿದಾಗ
ಬಹನೇ ಕೈ ತಾ!
ಕಿರಣ ಹಸಿರ ಮುದ್ದಿಡುತಿರೆ
ಬಿಂಬಿ ಬಸಿರ ಬಗೆದು ಬರೆ
ತುಂಬಿ ತನ್ನ ಗುಂಗಿನೊಳಿರೆ
ಕುಣಿದವನೇ ಬಾ!
ಕಣ್ಣು ಕಣ್ಣು ಸೆಳೆಯುತಿರೆ
[illegible] ನೆಳೆಯುತಿರೆ
ನೋಟ ಚೆಲ್ಲಿ ತಳೆಯುತಿರೆ
ಚಾಚಿದ ಕೈ ತಾ!

ಮನಸುಖರಾಯನ ಮಗಳು

ಗೌರಿಹುಣ್ಣಿವೆ ಬಂತು ಕಾರ ದುರ್ದಿನ ಸಿಂತು;
ಹಾರಿ ಹಾತೊರೆದು ಗೋಳಾಡುತಿಹೆನು
ಅರಸುಮಗಳಿಗು ಹೊರಗೆ ಹೋಗಗೊಡರೈ! ನನ್ನ
ಕನ್ನೆವಾಡದಿ ಕೂತು ನೋಡುತಿಹೆನು

ಎತ್ತೆತ್ತು ತೆರೆದಿರುವ ಹತ್ತು ಕಿಟಕಿಗಳಿಂದ
ಒತ್ತೊತ್ತಿ ಬರುತಿರುವ ನೋಟಗಳನು
ಎಷ್ಟು ದಿವಸನುಭವಿಸಿ ಕಡೆಗೆ ಕಳೆಯಲುಬಹುದು
ಸೃಷ್ಟಿ ಚದುರಿಯ ಮಾಟ ಮಾಟಗಳನು

*　　*　　*　　*

ಓಲಾಡುತಿವೆ ಹಕ್ಕಿ ತೇಲಾಡುತಿವೆ ಹಕ್ಕಿ
'ಗೌರಿಹುಣ್ಣಿವೆ ಬಂತು ಬಂತು' ಎಂದು
ಹಾರಾಡುತಿವೆ ಮತ್ತೆ ಚೀರಾಡುತಿವೆ ತಿಳಿದು
ತಮ್ಮ ಜನ್ಮವಿದೊಂದು ಹಬ್ಬವೆಂದು

ಹಕ್ಕಿಗಳ ಬಳಗವನ್ನೆಲ್ಲ ರೆಕ್ಕೆಯು ಬಲದಿ
ಮಿಕ್ಕಿ ಹಾರುವದೆಂಬ ಹರ್ಷದಿಂದ
ಚೊಕ್ಕ ಬೆಳ್ಳಿಯು ಕಂಕ ಕಿಂಕಿಲಿಸಿ ನುಡಿಸುತಿದೆ
ದಿಕ್ಕುದಿಕ್ಕನು ಧ್ವನಿಯ ಸ್ಪರ್ಶದಿಂದ

ಚೀಚಿಚೀ ಚೀಚಿಚೀ ಚಿಚಿಚಿಚೀ ಚೀಚಿ ಚಳಿ-
ಗಾಲದಾರತಿಯೊರೆವ ಕರಿಯ ಗುಬ್ಬಿ
ಚೀಚಿಚಿಲಿಪಿಲಿಗುಡುವ ಗುಬ್ಬಿಗಳ ಮುಂದೆ ಬಿಳಿ-
ಗರಿ ಸೆಟಿಸಿ ಕುಣಿಯುತಿದೆ ಉಬ್ಬಿಯುಬ್ಬಿ

ಬರುವ ಸುಗ್ಗಿಯ ಕೂಗು ಕಲಿತು ಇಡಬೇಕೆಂದು
ಈಗಿಂದ ಕೋಗಿಲೆಯು ಕುಕಿಲುತಿಹುದು
ಕರಿಕಾಗೆ ಕಾವ್‌ಗುಡಲು ಕೆಂಗಾಗೆ ಗೂಗಿಡುವ
ನೋಟ ನಡುಹಗಲೊಳಗೆ ಕಾಣಬಹುದು

ಹಿಂಗಾರಿ ಮಳಿಯಾಸೆಯಿಂದ ಹಾರುತ್ತಿರುವ
ಚಾತಕದ ಆತುರತೆ ಚೆಂದವಾಯ್ತು
ತಿಂಗಳನ ಹಾಲ್ಕುಡಿದು ಜಾಗರದಿಯೊರೆಯುವ ಚ-
ಕೋರ ರವ ಬೆಳಗಿನಲಿ ಮಂದವಾಯ್ತು

* * * *

ಉಗುರುಬೆಚ್ಚಗೆ ಬಿದ್ದ ಬಿಸಿಲು ಗಾಳಿಗೆ ನಡುಗೆ
ಚಳಿಯು ಮುಂಚೂಣಿಯೆಂದೆನಿಸುತಿಹುದು
ಹಗುರಾಗಿ ಜಾರುವಿರುಳನ್ನು ಕಾಣುತ ಜೀವ
ಬೇಸಿಗೆಯ ರಾತ್ರಿಯನು ನೆನೆಸುತಿಹುದು

ಹಲವು ಬಣ್ಣದ ಸಂಜೆ ದಿಗಲುಬಡಿಸುತ ಬರಲು
ಜೀವಕೋಟಿಯು ಮೈಯ ದಣಿವು ಹೋಯ್ತು
ನೆಲವು ಪಚ್ಚೆಯ ಹೊಲವು, ಮುಗಿಲು ಹೀರಕದ ಮನೆ
ಆಡವಿಗಡವಿಯೆ ಹೊನ್ನ ಬಣಿವೆಯಾಯ್ತು

ಅಮೃತದರವಟ್ಟಿಗೆಯೊ, ಹಾಲ ಆಲೀಮನೆಯೊ,
ಎಂಬಂತೆ ಬೆಳ್ದಿಂಗಳಿದ್ದ ಇರುಳು
ಅಮೃತಾನುಭವವಾಗಿ ಅರಗುಟುಕು ಆದಂತೆ
ಎನಿಸಿ ಕೊರಗುವದೆಲ್ಲ ಜನರ ಕರುಳು

ಚಿಕ್ಕಿ ಚಕ್ಕನೆ ಹೊಳೆದು ಬಿಳಿಮೋಡಗಳ ಮುಸುಕು
ಹೊಕ್ಕು ಫಕ್ಕನೆ ಮತ್ತೆ ಹೊರಗೆ ಬಂದು
ನಕ್ಕು ನಗಿಸುತ್ತಲಿವೆ ಅಕ್ಕರದ ನೋಟಕರ—
ಚಿಕ್ಕಮಕ್ಕಳ ಆಟ ಸ್ಮೃತಿಗೆ ತಂದು

ಸೊಂಪುಳ್ಳ ಸೇವಂತಿಗಂಪು ಪೇರಲಗಂಪು
ಬಂತು, ಬಿಡದಿರಲು ಮುಂಜಾವ ಜೊಂಪು
ತಂಪುಗಾಳಿಯು ಕೂಡ ಕುಣಿಯುತ್ತ ಹಾಡುತ್ತ
'ಹಂಪುಗಾಲದ ಸೆಂಪು ಸೊಂಪು ಸೊಂಪು'

* * * *

ಗೊಲ್ಲತಿಯು ನಾನಾಗಿ ಅಲೆದಾಡಿ ಬೀದಿಯಲಿ
ತಿರಿದು ಈಚಲಚಾಪೆ ಹೆಣೆಯಬಹುದು
ಬಲ್ಲಂತೆ ನಾನು ನಾಡಾಡಿ ಡೊಂಬತಿಯಾಗಿ
ಗಣೆಮಿಣೆಗಳನ್ನೇರಿ ಕುಣಿಯಬಹುದು

ತಿರಿಪೆ ಅನ್ನವೆ ಇರಲಿ ಹರಕು ಅರಿವೆಯೆ ಬರಲಿ
ಓರಿಗೆಯು ಮೈಯೊಡನೆ ತಿರುಗಬಲ್ಲೆ
ನೆರಳನ್ನು ಬಿಟ್ಟೆಲ್ಲೊ ತಿರುಳೆ ಮೈಗರೆದಿರಲು
ಅಂಥ ಒಗೆತನವನ್ನು ಮರೆಯೊ ಒಲ್ಲೆ

ಆ ಅನಾಹತದ ಸಂಗೀತ ಕೇಳುವದೆಂದೊ?
ಮುದ್ದು ನುಡಿಗಾಗಿ ಹಸಿದಿಹುದು ಕಿವಿಯು
ನಾ ಅರಸಿ; ನೀ ಅರಸ. ಉಚ್ಚನೀಚಸೆ ಬರಲಿ.
ಒಗರಿರುವ ವರೆಗಂತು ಹುಳಿಯೆ ಸವಿಯು

ನಾನು ಮನಸುಖರಾಯನೆಂಬ ರಾಜನ ಮಗಳು
ನರಳುತಿಹೆ ಬಂಧನವ ಅಡಸಿಕೊಂಡು
ಏನಾರೆ ಮಾಡಿ ಯಾರಾರೆ ಬಂದಿಲ್ಲಿಂದ
ಎಲ್ಲಾದರೂ ಹೋಗಿ ಬಿಡಿಸಿಕೊಂಡು

ತೆರೆದ ಕರಣವ ಮುಚ್ಚಿ ಮರೆಯು ದೈವವನರಸಿ
ಇಷ್ಟುದಿನ ಬಳಲಿದುದು ಅಷ್ಟೆ ಸಾಕು
ಧರೆಯು ಸಿರಿ ಸೂರೆ ಹೋಗುತ್ತಿರಲು ಬರ ಏಕೆ?
ಕಣ್ಣಚೆಲುವನು ಮೊದಲು ಉಣ್ಣಬೇಕು

ಕವಿಕಲ್ಪನೆ

(ನೀರು) "ಬಿಸಿಲಿಗೆ ಬೇಸತ್ತು
ಹೋದೆನು ಭೂಮಿಯನ್ನು ಬಿಟ್ಟು
ಮೋಡವಾಗಿ ಮೇಲೆ
ಚರಿಸುವೆ ನಭದೊಳಗಾಮೇಲೆ
ಚಂದ್ರ ಸೂರ್ಯರನ್ನು
ಮುಸಕುವೆ ನಿಮಿಷದೊಳಗೆ ನಾನು
ಚಿಕ್ಕ ಚಿಕ್ಕೆಗಳನು
ಉದರಲು ಉದರದಿ ಹಿಡಿಯುವೆನು
ಶಾಂತಿ ಮಾಡುವವರು
ಭೂಮಿಗೆ ನಾನಲ್ಲದೆ ಯಾರು?"

* * * *

(ನಿದ್ರೆ) ರಣ ರಣ ರಣ ಬಿಸಿಲು;
ಸುತ್ತಲು ಬರಿ ಬಿಸಿಲೇ ಬಿಸಿಲು

ಎತ್ತ ನೋಡಿದರೂ
ಬಿಸಿಲೇ ಬಿಸಿಲು ಕೆಳಗೆ ಮೇಲೂ;
ಕೆರೆ ಹೊಳೆ ಹಳ್ಳಗಳು
ಜಗದೊಳಗೆಲ್ಲಾ ಬತ್ತಿರಲು
ಪಾಂಥನು ಬಂದಿರಲು
ಕೊಡುವದು ಆಶ್ರಯವನು ನೆಳಲು
ಮಲಗಿರಲವನಲ್ಲಿ,
ಕನಸನು ಕಂಡನಷ್ಟರಲ್ಲಿ;
ಹೂವಿನ ತೋಟಗಳು
ಹೆಣ್ಣಿನ ಕಣ್ಣಿನ ನೋಟಗಳು
ಹರಿಯುವ ಹಳ್ಳಗಳು
ತಾವರೆ ತುಂಬಿದ ಕೊಳ್ಳಗಳು
ನವರತ್ನದ ಮಹಲು
ಕಳಸವೆ ಮುಟ್ಟಿತದರ ಮುಗಿಲು
ಸಾವಿರಾರು ಕನಸು
ಕಂಡನು. ಮರುಳಾಯಿತು ಮನಸು
ಇಂತಹ ಮೋಹಕರು
ಇಳೆಯೊಳು ಅವಳಲ್ಲದೆ ಯಾರು?

*   *   *   *

ಕವಿಕಲ್ಪನೆಯಲ್ಲೇ?
ಇದನ್ನೂ ಅವಳೇ ಕಟ್ಟಿಲ್ಲೇ?
ಶಾಂತಳು ಮೋಹಕಳು
ಜಗದಲಿ ಅವಳೊಬ್ಬಳೆ ಇಹಳು

ನಿದ್ದೆ

ಮೂಡುವೆಳೆನೇಸರನ ಕಮಲಮುಖ ಕಂಡಿಲ್ಲ
ಹಾಡುವೆಳೆಹಕ್ಕಿಗಳ ಹಾಡುಗಳ ಕೇಳಿಲ್ಲ
ಆಡುವೆಳೆಮಕ್ಕಳೊಡನಾಡಿಲ್ಲ, ಓಡುವೆಳೆ-
ಕರುಗಳೊಡನೋಡಲಿಲ್ಲ

ನೋಡಿದ್ದ ಕನಸನ್ನೆ ತಿರುತಿರುಗಿ ನೋಡುತ್ತ
ಬೇಡಿದ್ದರೂ ಮತ್ತೆ ಬೇಡಿದ್ದ ಹಾಗಾಗಿ
ಕಾಡಿದ್ದ ಕೇಡಿದ್ದ ಬಾಡಿದ್ದ ನಿದ್ದೆಯೊಡ-
ಗೂಡಿದ್ದೆ ಕಾಮಿಯಂತೆ

ಸೊಲ್ಲಿದ್ದರೂ ನುಡಿಯು ಸೊಗಸುಸಿಗದೆಂದಿಗೂ
ಬಲ್ಲಿದ್ದರೂ ಬಲ್ಲತನಕೆ ಸಲ್ಲಾಗುವದು
ಎಲ್ಲಿದ್ದರೂ ಬಂದು ಗಂಟುಬಿದ್ದಿದ್ದ ನಿ-
ದ್ದೆಯ ಸಂಗ ಸಾಕು ಸಾಕು

ಒಲ್ಲೆನಿಸಿ ಒಮ್ಮೊಮ್ಮೆ ನನ್ನ ಎದೆಗುಂಡಿಕೆಯು
ಝಲ್ಲೆನಿಸಿ ಬೆಚ್ಚಿ ಎಚ್ಚರಿಯೆ ಮೆಚ್ಚನು ಹೊಚ್ಚಿ
ಕಲ್ಲೆನಿಸಿದಂತೆ ಮಾಡುವಳು ಇವಳೇ ನಿದ್ರೆ,
ಕಲ್ಪಾಂತ ಕಾಲ ರೌದ್ರೆ

ನಿದ್ದೆ ಪಂಚೇಂದ್ರಿಯಕೆ ಪಂಚತ್ವವೀವಂಥ
ವಿದ್ಯೆಯಿದು, ರಾಕ್ಷಸರು ಜಗಕೆ ಕಟ್ಟಿದ ರಕ್ಷೆ
ನಿದ್ದೆ ಸಂಸಾರಸಾರವನು ಹೀರುವ ಜಿಗಳಿ
ಸುಖ ನುಂಗುವಂಥ ಸೆಗಳಿ

ನಿದ್ದೆಯೆಂದರೆ ಕಣ್ಣು-ಕಟ್ಟು ಮಾಡುವ ಮೋಡಿ
ನಿದ್ದೆಯೆಂದರೆ ಕಲ್ಲುಮಾಡ ಜಡೆದಿಹ ಬೇಡಿ
ನಿದ್ದೆಯೆಂದರೆ ಸಪ್ಪಗಿಹ ಸಾವು, ಮಾಗಿಯೊಳು
ಮಡಿಯೆ ಮಲಗಿದ್ದ ಹಾವು

ಏ ನಿದ್ದೆ! ಏನಿದ್ದೆ! ಏನಾದೆ ನೀನು ಹಾ!
ಏನು ಸಂಜೀವನೀ! ಜೀವಹರಳಾದೆ ನೀ!
ಏನಿದ್ದೆ! ಎಲೆ ನಿದ್ದೆ! ಇಕೊ ಬಿದ್ದೆ! ಎದ್ದಿದ್ದೆ!
ಧಡಡ ಕಡಕೊಂಡು ಬಿದ್ದೆ!

ಏ ನಿದ್ದೆ! ಏನಿದ್ದೆ? ಏನಾದೆ ನೀನು ಹೇ!
ಏನು ಸಂಜೀವಕನು ನಿರ್ಜೀವನಾದನೇ!
ಏ ನಿದ್ದೆ! ಎಲೆ ನಿದ್ದೆ! ಬಿದ್ದಿದ್ದೆ! ಇಗೋ ಎದ್ದೆ!
ಝಾಡಿಸಿದೆನಿದ್ದ ನಿದ್ದೆ!

ರಾತ್ರಿಗೆ—

[ಮುಗಿಲಂಗಳದಲ್ಲಿ ಕೂಡಹತ್ತಿರುವ ಮೋಡಗಳ ಕಡೆಗೆ ನಿರ್ಹೇತುಕವಾಗಿ ನೋಡುತ್ತಿರುವಾಗ, ಮನಸ್ಸಿಗೆ ಒಲ್ಲೆನಿಸುತ್ತಿದ್ದರೂ, ಪರ್ಯುತ್ಸುಕತೆಯು ವಿಷದಂತೆ ಅಂತಃಕರಣವನ್ನೆಲ್ಲ ತುಂಬಹತ್ತಲು, ಪ್ರಸವೀಶಕ್ತಿಯ ಸ್ಥಿತಿಯು ಏನಾಗುತ್ತಿದ್ದೀತು ?]

ನಾಲಿಗಿಲ್ಲದ ಗಂಟೆಯಂತಾಯಿತೀ ಬಾಯಿ,
ಜಾಲದೊಳು ಸಿಕ್ಕ ಹಕ್ಕಿಯವೊಲಾಯಿತು ಮನವು,
ತಾಲವಿರಹಿತವಾಯಿತರ್ಥವೂ ಶಿವಶಿವಾ !
ಜೀವ ನಿರ್ಜೀವವಾಯ್ತು

ವಿವಿಧ ಬಣ್ಣಗಳಾಟ ಕಾಣಿಸದು ಕಂಗಳಿಗೆ,
ನವರಸದ ಸಂಗೀತ ಕೇಳಿಸದು ಕಿವಿಗಳಿಗೆ,
ಸವಿಯನರಿಯದು ಜಿಹ್ವೆ, ಪರಿಮಳಂಗಳ ತಾರ-
ತಮ್ಯ ತಿಳಿಯದು ಮೂಗಿಗೆ

ವಿಶ್ವಮೋಹನಕರೀ! ಶ್ರೀ ನಿಶಾದೇವಿಯೇ!
ನಶ್ವರದ ಪರಿಚಯವು ಬಹಳಾಯ್ತು. ಇನ್ನೆನಗೆ
ಶಾಶ್ವತದ ಪದದೋರು, ನಿಪ್ರೆ ಮರಣಗಳೆಂಬ
ಮೊಲೆಯುಣಿಸು; ಬಂದೆ ನಾನು

ಹಸಿದು ಬಂದಿಹೆನುಣಿಸು, ನೀರಡಿಸಿ ಬಂದಿಹೆನು
ತುಸು ನೀರ ಕುಡಿಸೆನಗೆ, ತೂಕಡಿಸಿದೊಡನೆ ನಾ
ಹೊಸಲಾಲಿಯನ್ನಂದು ನಿನ್ನ ತೊಡೆಯನು ಹಾಸಿ
ಮಲಗಿಸೆನಗದರ ಮೇಲೆ

ಹುಣ್ಣಿಮೆಯ ಚಂದ್ರಮನು ಹಲವು ಸಲ ಕೃತ್ತಿಕೆಯ
ಹೆಣ್ಣಿಗಾನಂದವನಿತ್ತರೂ, ಹಲವು ಸಲ
ಹಣ್ಣೆಲೆಗಳುದುರಿ ಬನ ಹಸುರಾದರೂ ತಿರುಗಿ
ನಿದ್ರಿಸುನೆ ನಿನ್ನ ಬಳಿಗೆ

ಜಲ್ಪನೆಯ ಬೇಸರಿಕೆ ಬಂತೆನಗೆ, ಸೊಗಯಿಸುವ
ಕಲ್ಪನೆಯು ಕೂಡ ಬಳಲಿತು, ಶ್ರಾಂತನಾದೆ ನಾ,
ಕಲ್ಪಾಂತಕಾಲ ಬಂದರು ನಿನ್ನ ನಂಬುವೆನು,
ನನ್ನ ವಟಪತ್ರವಾಗು

ರವದಿ

ಸೂಚನೆ:— ನನ್ನ ಮನಸನು ನಾನು ಕುಳಿತು ರಂಜಿಸುತಿರಲು
ತನ್ನ ಮನವಿಯನಿಡಲು ಬಂದ ಬಡವನ ಹಾಗೆ
'ಮನ್ನಣೆಯು' ಎಂದೆನುತ ಪಡುವಲದ ಗಾಳಿಯೊಡ
ಬಂದಿತೆನ್ನುಂದೆಯೇನೋ !

ಕಸದಂತೆ ಬಿದ್ದಂಥ ರವದಿ ಕಂಡೆನು ನಾನು
ಕಸವೆಂದು ಒಗೆದಂಥ ರವದಿ ಕಸವಾಗಿತ್ತು
ಕಸವಲ್ಲವೆಂದು ನಾನೆತ್ತಿದೆನು; ಅಂತೆಯೇ
ಕಸವಾಗಲಿಲ್ಲ ರವದಿ

"ಕಸಕಡ್ಡಿಗಳ ಕೂಡ ಬಿದ್ದಂಥ ರವದಿಯೇ !
ಹೊಸಹಾಡುಗಳು ನಿನ್ನವೆಲ್ಲಿ ಹೋಗಿಹವೀಗ ?
ಹೊಸಹಾಡುಗಳ ಹಾಡು, ಹೊಸನಾಡುಗಳ ನೋಡು-
ದಕೆ ಮನಸು ಓಡುದೀಗ

ಭವದ ಬಂಧಗಳನ್ನು ತಿಳಿಯದೇ ಸಡಲಿಸುವ
ರವದೆ! ನಿನ್ನಯ ರವವ ಕೇಳಿ ಕುಣಿದೆನು ದಣಿಯೆ;
ಸವಸವಾನಂದವನ್ನೀಯ್ದು ನಿನಗಾಗ್ಗೆ ಮಾ-
ಧವನ ಕೊಳಲೊಂದೆ ಸಮವು"

ರವದಿಯನ್ನೆತ್ತಿ ತುಟಿಹಚ್ಚು ತೂದಿದೆನು ನಾ;
ರವವು ಹೊರಡದು ಒಮ್ಮೆ ಹೊರಟಂತೆ ಈಗೇಕೊ?
ಹವಣಿಸುವೆನಿಷ್ಟೊತ್ತು, ಹೊರಚಲ್ಲಬಾರದೇ
ಒಮ್ಮೆ ಹೊರಟಂತೆ ಸ್ವರವು !

ಬಕ್ಕನೇ ಬತ್ತಲೇ ಹಗಲಿರುಳು ತಿರುಗಿದೆನು
ದಿಕ್ಕುದಿಕ್ಕಿಗೆ ಚಿಕ್ಕ ಗೆಳೆಯಂದಿರೊಂದಿಗೇ
ಚಿಕ್ಕಂದಿನೊಳು ನಾನು ನಿನ್ನನ್ನು ಊದುತ್ತ
ಬಾಯಿಂದ 'ಊ, ಊ' ಎಂದು

ಹಕ್ಕಿಹಾಡದಗಾಲ, ಚಳಿಗಾಲವಿದ್ದರೂ
ಲೆಕ್ಕಿಸದೆ ಹಾಡುವೆವು ಹಗಲಿಲ್ಲ ಇರುಳಿಲ್ಲ;
ಹಕ್ಕಿ ಇಂಥವು ನೋಡಿ ನಕ್ಕವಾಗೂ ಕೂಡ
ದಿಕ್ಕು ಚಕ್ಕಂದದಿಂದ.

ಸಡಿಗೆಯೊಳಗಿನ ಡೌಲು ಕಂಡು ನಾಚಿತು ನವಿಲು;
ನಡದೊಳಗಿನುಡದಾರದಿಂದೆದ್ದ ಗಿಲಗಿಲವು
ಕಡಗ ಗೆಜ್ಜೆಗಳೆರಡು ಅಡಿಗಡಿಗೆ ಅಲೆದಾಡಿ
ರುಮುರುಝುಮೆಂದೆದ್ದ ಸರವು

ನುಡಿಗೆ ಬಂದದ್ದಂದು ನಗುವ ಹುಡುಗರ ಕಂಡು
ನಡು ಊರಿನೊಳು ಕೂಡ, ಜನರಿಗನಿಸಿತೊ ಆಗ-
ಬಡಗ ಹುಡುಗರು ಏನು ಕೊಳಲೂದುತಿರುವರೋ
ನೀಲಗಿರಿ ದರಿಗಳೊಳಗೆ!

ಹರಿವ ಮನಸಿಗೆ ಕಾಣುವಂಥ ಗೊಂಬೆಗಳನ್ನು
ಹಿರಿಹಿರೀ ಹಿಗ್ಗುತದರಂತೆ ಪಾಟಿಯಮೇಲೆ
ಬರೆಯು ಹೋಗಲು ಕೀಚಿ ಚೀರಿದಂತಾಗೆ,
ಬಾಲಕರ ಮೈನಡುಗುವಂತೆ

ಮರೆತು ನಿನ್ನನ್ನೂದ ಹೋಗಲೊಡ ಹಾಗಾಗಿ
ಝುರಿಗೆ ನೀರಡಿಸಿ ಬಂದದನು ಬರಿ ಕಂಡಂತೆ
ಭರದಿ ಬೆಳೆಯುವ ಗಿಡಕೆ ಸಿಡಿಲು ಬಡಿದಂತೆ ಆಹ!
ಮನವು ದಶಖಂಡವಾಯ್ತು

ಇನ್ನೂ ವಿರಾಜಿಪಿರುಳಿನ ಹೆರಳುಭಂಗಾರ
ಇನ್ನುಮೆಲ್ ನೆರೆಸುರಿವ ಶೀತಲ ಮರೀಚಿಗಳ
ಜೊನ್ನುಸಹ ಸನ್ನ ಸೊಗಸಿನ ಹೂವು ಬಾಡುತಿರೆ
ವಿರಸವೆಂದೆನಿಸದಿರದೇ ?

ಭಿನ್ನನಾದೆನು, ನನಗೆ ತೋಚದಾಯಿತು ಹಾದಿ;
'ಛಿನ್ನ ಮನವನು ತಿರುಗಿ ಹೇಗೆ ಬೆಸೆಯಲಿ?' ಎಂದು
ಸನ್ನ ಮನಸಿಗೆ ನಾನು ಕೇಳುವನಿತರೊಳೆನಗೆ
ರವದಿಯುತ್ತರವು ಬಂತು:

ಮಧುಮಾಸದೇರ್ಗೆಂಪು ಪೋಪುದಷ್ಟೇ ಅಲ್ಲ
ಮಧುರ ಕಂಠವು ಅದರ ಕೂಡ ಬತ್ತುವದಿತ್ತ
ವಿಧುರನಂತೀ ಜಗವು ಬಳಲುವದು ಸುಖವಿಂಗು-
ತಾಗ ಅರಜೀವವಾಗಿ.

ವಿಧಿಚಕ್ರ ದಿಸರಾತ್ರಿ ತಿರುತಿರುಗಿ ಸುಗ್ಗಿ ಬರೆ
ಬಧಿರ ಜಗದಂತೆನಗೆ ಹರ್ಷವಿಮ್ಮಡಿಯಾಯ್ತು
ಮಧುರತರಸ್ವರ ಕೇಳಿ ಸಾಂದ್ರ ಆನಂದದಿಂದಲಿ
ಹರಿದಂಥ ಕೂಗುಗಳನು

ಆಗ ಉನ್ಮನನಾಗಿ ರವದೆಯನ್ನೂದುತ್ತ
ಆಗ ಮರಿಮರುತನೊಲು ಸುಖದ ಗೀತಗಳನ್ನು
ಜಾಗುಮಾಡದೆ, ಜಗವ ತೂಗಿಸುತ ಹಗಲಿರುಳು
ಹೊರಟೆ ನಾ ಮುಗಿಲಿನೊಳಗೆ

ಆಗ ಆನಂದ ಪರಮಾವಧಿಯನೇರಿತ್ತೈ !
ಯೋಗ ಹೊಂದಿತು ಮನಸು ತನ್ನ ಕನಸುಗಳಲ್ಲಿ;
ಭೋಗಿಸಿದೆನೋ ನಿದ್ರೆಯಲ್ಲಿ ಮರೆತಿದ್ದ ಜ-
ನ್ಮಾಂತರದ ಸುಖಗಳನ್ನು !

ಜೇನುಹುಟ್ಟು

ಕಾಡಿನೊಳು ಗಿಡಬಳ್ಳಿಗಳನು ಸುತ್ತಾಡಿ ನಾ
ನಾಡಿನೊಳಗಿನ ತೋಟಗಳನು ನೆರೆನೋಡೀಗ
ಬಾಡಿ ಬಳಲುತ ಜೇನು ಹನಿ ತೊಟಕು ದೊರಕದೇ
ತಿರುಗಾಡಿ ತಿರುಗಿ ಬಂದೆ

ಬೆಂದು ಬಿಸಿಲಿಗೆ ನೊಸಲ ಬೆವರನೊರೆಸುತ ಬಂದು
ಒಂದು ಬೇವಿನ ಬುಡಕೆ ಸಿಂದು ಅಳವಳದಿಂದ
“ಎಂದಿಗೂ ಸಿಗಲಾರೆಯಾ, ಜೇನಿನರಸಿಯೇ !”
ಮನದೆ ಕಡುನೊಂದು ಎಂದೆ

ಎನ್ನುತೀಪರಿ ಕಾಲ ಚಾಚಿ ಬೇಸರದಿಂದ
ಬೆನ್ನ ಭೂಮಿಗೆ ಹಚ್ಚಿ ಮಲಗುವನಿತರೊಳೆನ್ನ
ಕಣ್ಣೆದಿರು ಗಿಡದೊಳಗೆ ಗುಟ್ಟಿನಂತಡಗಿರುವ
ಜೇನ ಹಿರಿಹುಟ್ಟು ಕಂಡೆ !

ಅಬ್ಬರದ ಬೇಸಿಗೆಯ ಬೇಟಗಾರತಿ ರತಿಯ
ಹುಬ್ಬೆ ! ಹರೆಯದ ಬಯಕೆಗಳು ಕೊಬ್ಬಿ ಹೊರಡಿಸಿದ
ನಿಬ್ಬಣವೆ ! ಕಬ್ಬಿಣವ ಮಣಿಸಲಳವುಳ್ಳ ಕಾ-
ಮನ ಕೈಯ ಬಿಲ್ಲುಗಬ್ಬೇ !

ಹಬ್ಬವೇ ! ಕರಳು ಮರುಳಾಗಿ ಹಾಡುವ ಹಾಡು-
ಗಬ್ಬವೇ ! ಉಬ್ಬಿದೆದೆಯಿಂದ ಕೇಳೆದೆಂದೆ ನಾ-
ನೊಬ್ಬನೇ ನಿನ್ನನ್ನು ಬೆಟ್ಟೆಯಾಗುವೆನಿಂದು
ನಿಟ್ಟಿರುಳಿನಲ್ಲಿ ಬಂದು

ಕಾರಿರುಳ ಕತ್ತಲೆಯು ಗವಿಗೆ ಗೊತ್ತಾದಂತೆ
ಹಾರುಗಾಲಿನ ಭರದಿ ಗಿಡದಡಿಗೆ ತಲುಪಿದೆನು
ದಾರಿಕಾರರ ಹಾಗೆ, ನೀರಡಿಸಿ, ಬೇಸಿಗೆಯ
ನಡುಹಗಲಿನಲ್ಲಿ ನಡೆದು

ಮೂರು ಬೊಟ್ಟಿನ ಮೇಲೆ ಕಂಡೆ ಕಟ್ಟಿದ ಮುಗಿಲು
ಹಾರಿದೆನು ಜೇಂಗೊಡಕೆ, ಹೀರಿದೆನು ಬಾಯ್ಬುಚ್ಚಿ
ತೀರಿದರು ತಣಿವಿಲ್ಲ ಮೈಮರೆಯೆ ಕುಡಿದರೂ
ಮನದಣಿಯಲಿಲ್ಲ ಕಡೆಗೂ

ಆನಂದವೇ !

ಗೆಳೆಯರ ಸಮೂಹದೊಳು ನಗುತ ಕೆಲೆಯುತ ಕಾಲ
ಕಳೆದೆನು; ವಿಹಂಗಗಳ ಗಗನದೊಳಗಿನ ಗಮನ,
ಮಳೆಗಳಾಡುವ ಪಗಡಿ-ಪಕ್ಕಂಗಳನ್ನು ಹೂ-
ಚಿಗುರೆಲೆಯ ಲೀಲೆಯನ್ನು

ಹಳಿಯುದಿನಿಸುಳಿಸದಲೆ ಸಕಲವನು ಭೋಗಿಸುತ
ಬೆಳೆದೆ, ಹನಿ ಬಿಡದೆ ನಿನ್ನನು ಸವಿದೆನಾನಂದ !
ಗಿಳಿಯು ಕುಡುಚೊಗಚಿಯೊಳು ಅಡಗಿದಂತಹ ರಸವ
ನೋಡಿ ಗಡ ಹೀರುವಂತೆ

ಅಕ್ಕೆಕ್ಕಿಗಳ ಚಿಕ್ಕ ಚಿಕ್ಕೆಗಳ ಸುರಿದ ಬೆ-
ನ್ನಕ್ಕರದೊಳೇರಿ, ಭೋರಂಗಿಗಳ ಭುಂಕಾರ-
ವಕ್ಕರಿಸಿ ಸಂಕೇತದಂತೆ, ದುಂಬಿಯು ಹಲವು
ಬಣ್ಣದಾ ಪಕ್ಕಗಳನು

ಸಿಕ್ಕಿಸಿಕ್ಕಿತಿದೀಗಯೆನುತ ಹೊಲಗದ್ದೆಗಳ
ಹೊಕ್ಕು, ಸಿಗದಿದ್ದರೂ ನಕ್ಕೆನಾನಂದವೇ !
ನಕ್ಕು ನಗಿಸುತಲೆನಗೆ ಮನೆಯಿಂದಲೆಳೆದೊಯ್ದ
ಬಿಸಿಲುಮಳೆಚಳಿಗಳಲ್ಲಿ

ಹಾಲುಗಲ್ಲದ ಬಾಲನೊಲು ಕಂದ! ಆನಂದ!
ಕಾಲುಗಳನಿಡುತ ಬಾ ದಟ್ಟಡಿಯ ಚಂದದಲಿ
ಬಾಲಕರನಂತ ಲೀಲೆಗಳನ್ನು ತೋರುತ್ತ
ಮುತ್ತೈ! ಬಾ! ಮುದ್ದೈ ಬಾರೈ!

ಸಾಲಲಾರದೆ ಕಂಠ, ಗದ್ಗದದ ವಚನಗಳು
ಮೇಲು ಮೇರೆಯ ಮೀರಿ ಬಾಯ್ದೆರೆದು ತೇಲುವವು
ನಾಲಿಗೆಗು ನಿಲುಕಲಾರದ ನುಡಿಗಳನ್ನು ನಾ
ನುಡಿಯುವದದಾವ ತೆರದಿ?

ಬಾ ನನ್ನ ಹೃದಯಮಂದಿರದ ಬಾಗಿಲ ತೆರೆದೆ
ಯಾ ನಿನ್ನ ರೂಪಕ್ಕೆ ಜಗವು ಮರುಳಾಯಿತೋ
ಆ ನಿನ್ನ ರೂಪವನೆ ಧರಿಸಿ ಬಾ, ಜೀವಿತದ
ಸಾರ್ವಭೌಮನೆ ಮೆಲ್ಲನೆ.

ಈ ನನ್ನಯಂತರಂಗದ ಸಭಾಮಂಟಪವ
ನಾನೆನ್ನ ಕೆನ್ನೀರಿನಿಂದ ತಳಿಹೊಡೆದೆನೈ
ಬಾ, ಸನ್ನಿಯೇ ನಿನ್ನ ಗದ್ದಿಗೆಯೋಲಾಗುವದು
ಏರದನು ಪಟ್ಟದರಸೇ !

ನಗೆಯು ನಗರಾಜನಲಿ ಹರಿವ ಗಂಗಾನದಿಯು
ಮಿಗಿಲಾದ ಹರಿಹದೊಲು ಹರಿಯೆ ಸೂಸಲು ತಡೆಯು;
ಸೊಗಸೆ! ನಿನ್ನನ್ನಾಗ್ಗೆ ಬೊಗಸೆಯಿಂದಲಿ ಕುಡಿದೆ-
ಕುಡಿದು ನೊರೆಯುಳ್ಳ ನೀರು

ಚಿಗಿತವಾಕಾಂಕ್ಷೆಗಳು ಚಿಕ್ಕಂದಿನಲಿ, ನಿನ್ನ
ಹಗಲಿನೊಳು ಕಲ್ಪವೃಕ್ಷಗಳಂತೆ ಬೆಳೆಯುತ್ತ
ಮುಗಿಲನ್ನು ಭೇದಿಸುತ್ತೇರಲಿಚ್ಛಿಸುತಿಹವು
ಹಾರು ಮೇಲಕ್ಕೆ ಮುಗಿಲೇ !

ಶಾಂತಕವಿಗಳ ವಿಶ್ರಾಂತಿ

ನಟ ತೆರೆಯ ಮರೆಯಾದ ಆಟ ತೀರಿಸಿಕೊಂಡು,
ಭಟ ಸಮರದಿಂದ ತೆರಳಿದ ಅರಸನರಮನೆಗೆ;
ಪಟು ಪಾಡುಗಾರ ತುಟಿ ಮುಚ್ಚಿದನು ನಾಡು-
ನುಡಿಗಳ ಹಾಡುಗಳನು ಹಾಡಿ.

ಆಟಮಟದ ಮಾತಲ್ಲ; ನಾಡೆ ನಾರಾಯಣನು,
ದಿಟವಾಗಿ 'ನುಡಿಯೆ ಸಿರಿ' ಎಂದು ಕೀರ್ತನೆಗೈದು
ಹಟದಿ ಕೀರ್ತನಗಾರ ಬೆವರನೊರಿಸಲು ಹಿಂದೆ
ಸರಿದ ವಿಶ್ರಾಂತಿಗಾಗಿ.

*   *   *   *   *

ಮುಪ್ಪಾಗಿ ಜಿರಿಯಾದ ಬಟ್ಟೆಯನು ಬೀಸಾಡಿ
ದಪ್ಪನ್ನ ಹೊಸದೊಡಿಗೆಯನು ಬೇಡಲಂಬರಕೆ
ಸಪ್ಪಗಿನ ನುಡಿಗಾಗಿ ಉಪ್ಪು ತರಹೋಗಿಹರು
ರಸವಂತಿಯಿರುವ ಕಡೆಗೆ.

ಸಿಪ್ಪಿಯನೆ ಬಹುದಿವಸ ಚೀಪಿ ಬೇಸರಬಟ್ಟು
ಅಪ್ಪನಲಿ ಹೊಸಹಣ್ಣು ಪಡೆಯುಹೋಗಿಹರಿಂತು
ತಪ್ಪದೇ ತಿರಗುತಿಹರೆಂದು ತಿಳಿಯಲಿ ಜನರು
ಬೆಳವೊಲದ ನಾಡಿಗಾಗಿ.

ತಿರುಕ

ನಾಡಾಡಿ ಕತ್ತೆಗೆ
 ಹಾಳುಗೋಡೆಯ ನೆರಳು
ಬೀಡಾಡಿ ನಾಯಿಗೆ
 ಬೀದಿಗಾವಲಿ ನೀರು
ಕಾಡುವ ಕಾಗಿಗೆ
 ತಿಪ್ಪೆಯೆಂಜಲು ಕೂಳು
ಹಾದಿಯ ಹಕ್ಕಿಗೆ
 ಬರಡುಮರದಲಿ ಜೊಂಪು
ತಿರುಕಾ—ಏ ತಿರುಕಾ!
 ಮನುಜನಾದರೆ ಏನು
ಮರುಕವಿಲ್ಲದ ಜಗವೆ ನರಕಾ!
 ಕಾಣೊ ನರಕಾ!

ಗತಿಗೆಟ್ಟ ವಿಧವೆಗೆ
 ನೀರಿನ ತಳ ತವರು
ಪರದೇಶಿ ಕೂಸಿಗೆ
 ಅತ್ತರೆ ಔಷಧವು
ಪಾಪಿಗಜ್ಞಾನಿಗೆ
 ಕೊರಳ ಗಂಟೇ ನಂಟು
ನೋವ ನುಂಗಿದವಗೆ
 ಹಸಿವುಂಟು ವಿಷವುಂಟು
ತಿರುಕಾ— ಏ ತಿರುಕಾ!
 ಕರುಳು ಇದ್ದರೇನು
ಕಣ್ಣು ಇಲ್ಲದ ಜಗವೆ ನರಕಾ!
 ಕಾಣೊ ನರಕಾ!

ಪರಾಗ

ಬಾ ಭೃಂಗವೆ ಬಾ, ವಿರಾಗಿಯುಂದದಿ
ಭ್ರಮಿಸುವಿ ನೀನೇಕೇ?
ಕಂಪಿನ ಕರೆಯಿದು ಸರಾಗವಾಗಿರೆ
ಬೇರೆಯ ಕರೆ ಬೇಕೇ?

ಬರಲಿಹ ಕಾಯಿಯ ಪಾಡಿನ ರುಚಿಯೂ
ಇದರೊಳು ಮಡಗಿಹುದು.
ನಾಳಿನ ಹಣ್ಣಿನ ರಸವಿಲ್ಲಿಯು ಮಕ-
ರಂದದೊಳಡಗಿಹುದು.

ಕವನ ಕೋಶದೀ ಕಮಲ ಗರ್ಭದಲಿ
ಪರಾಗವೊರಗಿಹುದು.
ನಿನ್ನ ಮುಖಸ್ಪರ್ಶವೂ ಸಾಕು; ಹೊಸ
ಸೃಷ್ಟಿಯೆ ಬರಬಹುದು ॥ ಬಾ, ಭೃಂಗವೆ, ಬಾ

ವಸಂತಮುಖ

ಉದಿತ ದಿನ! ಮುದಿತ ವನ
ವಿಧವಿಧ ವಿಹಗಸ್ವನ
ಇದುವೆ ಜೀವ, ಇದು ಜೀವನ
ಪವನದಂತೆ ಪಾವನ

ಏನೊ ವಿಧ! ಏನೊ ಹದ
ಗಾಳಿಗೊಡೆದ ಬುದ್ಬುದ
ಬೆಳಕೆ ಬದುಕು ಎಂಬ ಮುದ
ಜೀವಹೊಮ್ಮ ಚಿಮ್ಮದ

ನೂರು ಮರ! ನೂರು ಸ್ವರ
ಒಂದೊಂದು ಅತಿ ಮಧುರ
ಬಾಧವಿರದೆ ಬಂಧುರ
ಸ್ವಚ್ಛಂದ–ಸುಂದರ

ಶ್ರಾವಣದ ವೈಭವ

ಏನು ಹಸಿರು! ಏನು ಹಳದಿ!
ಸುತ್ತುಮುತ್ತು ನೋಡು ಕೆಳದಿ! ॥ ಪಲ್ಲ ॥

ಹುಲ್ಲು ಹೂವು ಆದರೇನು,
ಹಬ್ಬದುಬ್ಬಿನಲ್ಲಿವೆ;
ದಿಬ್ಬಗಳನು ತಬ್ಬಲೆಂದು
ಎಲ್ಲ ನೆಲಕು ಹಬ್ಬಿವೆ.

ಮಳೆಯ ಬಿಲ್ಲು ಮುರಿದು ಹತ್ತು-
ಕಡೆಗೆ ಹಂಚಿದಂತಿದೆ,
ಹುಲ್ಲು ಕಸವು ಬಣ್ಣ ಬಡೆದು
ಹೂತು ಹಿಗ್ಗಿ ನಿಂತಿದೆ.

ನೆಲದ ಬಸಿರ ರತ್ನರತ್ನ
ತನ್ನ ಸೊಬಗ ಕಳಿಸಿದೆ;
ಬಣ್ಣದೊಂದು ಜಾತ್ರೆಗಾಗಿ
ತನ್ನ ಪಯಣ ಬೆಳೆಸಿದೆ.

ಮಣ್ಣುಹುಡಿಯು ಕಣಕಣವೂ
ಕಣ್ಣುಪಡೆದ ಹಾಗಿದೆ;
ಬಾನಿನಂಚಿನಲ್ಲಿ ಮೋಡ
ನೋಡಲಿದನೆ ಬಾಗಿದೆ.

ಮುಗಿಲು ನೆಲಕೆ ಮುಕ್ಕು ಚಿಕ್ಕೆ
ಕಾಳುಗಳನು ಬಿತ್ತಿದೆ;
ನೆಲವು ಮುಗಿಲಗರ್ತಿಯಿಂದ
ಆರತಿಯನ್ನೆತ್ತಿದೆ.

ಬಸಿರೆ ಹೊಲಕೆ ಹೂವು-ಮುಡಿಸ-
ಲೆಂದು ಬಂದ ಸಂಭ್ರಮು;
ಸೃಷ್ಟಿಯಲ್ಲೆ ಕಾಣುತಿಹುದು
ಮನುಜನೆತ್ತಿದೀ ಕ್ರಮು.

❖ ❖ ❖ ❖

ರಂಗು ಇಹುದು, ರೂಪವಿಹುದು,
ಗಂಧ ಒಳ್ಳಿತಿಲ್ಲವು;
ನಯವು, ನುಣುಪು, ಇದ್ದು ಏನು?
ವ್ಯರ್ಥವಾಯಿತೆಲ್ಲವು!

ಚದುರು ಹೂ ಲವಂಗ ಮತ್ತೆ
ಇದಕೆ ಹೆಸರು ಹೇಸಿಗೆ;
ಹೆಸರು ಪಡೆದ ಹೂವೆ ನಿನಗೆ
ಇಲ್ಲ ಮಳೆಯು ಬೇಸಿಗೆ.

ರಂಗವಲ್ಲಿ ಹಸೆಯು ಹಾಗೆ
ಏನು ರಂಗು ರಂಗಿದೆ!
ಗುತ್ತನಾಗಿ ಒತ್ತಿ ಬೆಳೆದು
ತಂಗಿದಲ್ಲಿ ತಂಗಿದೆ!

ಡೊಂಕು ಇಲ್ಲ, ಬಿಂಕವಿಲ್ಲ,
ಮುರಕ ಮಾಟವಿಲ್ಲದೆ,
ಹೊಲದ ಹೂವು ನೆಲದ ಹಾಗೆ
ನಿಂತ ಕಡೆಗೆ ನಿಲ್ಲದೆ?

ಗಾಳಿ ಬೀಸಿ ಹಾಸಿ ಹೋಗಿ
ಗಾಸಿ ಮಾಡಬಂದರು
ವಾಸಿಯಾಯಿತೆಂಬುವಂತೆ
ಇಹುದು ನೋಡು ನೊಂದರು.

❖ ❖ ❖ ❖

ಹುಡಿಯು ಅರಳಿ ಹೂವು ಆಗೆ,
ಹುಳಕೆ ರೆಕ್ಕೆ ಒಡೆದವು;
ಮುಸುಕು ಹರಿದು ಪಕ್ಕ ತೆರೆದು
ಚಿಟ್ಟೆ ಮುಕ್ತಿ ಪಡೆದವು.

ಮುಕ್ತಿ ಪಡೆದ ಹರ್ಷವೆನಲೊ!
ಸೆರೆಯು ಬಿಟ್ಟ ಹುಚ್ಚಿದು.
ಏನು ಆದರೇನು ಇಹುದು
ಅಚ್ಚ ಅಚ್ಚುಮೆಚ್ಚಿದು.

ಪಾತ್ರದವಳು ನೂರು ನಾಟ್ಯ
ಆಡುವಂತೆ ಆಡುವ–
ಹುಡುಗನಂತೆ ಹುಡುಗಿಯಂತೆ
ಸಿಕ್ಕಕಡೆಗೆ ಓಡುವ–

ನಯುವೆ ರೆಕ್ಕೆಪಡೆದು ಚೆಲ್ಲ-
ವರಿದು ಪಾರುತಿರುವದು;
ಹುಚ್ಚುಹಿಗ್ಗಿಗೆಗ್ಗು ಇಲ್ಲ
ಎಂದು ಸಾರುತಿರುವದು.

ರೆಕ್ಕೆ ಹುಳುಗಳಲ್ಲ ಇವೂ
ಚಿಕ್ಕ ರೂಪ ತಾಳಿದ
ಚೊಕ್ಕ ಅಪ್ಸರಸಿಯುರೇ
ನಕ್ಕು ನಲಿಯುತಿರುವರು.

ಇಂದ್ರಜಾಲದಿಂದ ಬಂದ
ಸುಂದರಿಯುರು ' ಎಂಬುದು
ಊಹೆ ಕೂಡ ಊಹಿಸಿಯೂ
ತನ್ನ ತಾನೆ ನಂಬದು;

ಒಂದನೊಂದು ಅಟ್ಟುತಿಹವು
ಒಂದನೊಂದು ಮುಟ್ಟಲು,
ಅಲ್ಲು ಇಲ್ಲು ಎಲ್ಲು ಚಿಟ್ಟೆ
ಸಾಲು ಸಾಲು ಮೆಟ್ಟಿಲು.

ಪ್ರಣಯಭಂಗ ಪಂಕ್ತಿ ಪಂಕ್ತಿ
ಸ್ವರ್ಗಸೋಪಾನವು !
ಎದೆಯಲಿದ್ದ ತನನ ತಾನ
ಮೌನವೆತ್ತ ಗಾನವು !

ಹೂವು ಪಕಳೆ ಪ್ರಾಣ ತುಂಬಿ
ಚಿಟ್ಟೆಯಾಗಿ ಕಾಂಬವೊ !
ಕುಣಿದು ದಣಿದ ಚಿಟ್ಟೆ-ಪಕ್ಕ
ಹೂವು ಎನಿಸಿಕೊಂಬವೋ !

ಒಂದನೊಂದು ತಬ್ಬಿ ಮಣಿತ್ತಿ
ಏಕಜೀವವಾಗಿವೆ.
ಜಡವು ಜೀವವೆಂದು ಸುಳ್ಳೆ
ಎರಡು ರೂಪವಾಗಿವೆ.

ಎಂಟು ಹತ್ತು ಗುಂಪುಗುಂಪು
ಒಂದನೊಂದು ಬಳಸುತ
ಒಂದನೊಂದು ಎಳೆದು ಎಳಸಿ
ಹಿಂದೆಮುಂದೆ ಕಳಿಸುತ

ಚಿಟ್ಟೆದುಂಬಿ ಒಟ್ಟಿಲಾಗಿ
ದೊಂಬಿಯಾಡುತಿರುವವು;
ಗೊಂಬಿ ಬರೆದ ಹಾಗೆ ಹೂವು
ಅದನು ನೋಡುತಿರುವವು.

❖ ❖ ❖ ❖

ಹಾಳು ಬೀಳು ಪಡವು ಬಂಜೆ
ಹಕ್ಕಲೊಕ್ಕಲೆಲ್ಲವೂ
ವ್ಯಾಪ್ತವಾಯ್ತು ಹೂವ ಹೂವ
ರಾಸಲೀಲೆಗೆಲ್ಲವೂ.

ಹೂವ ಹಡಲಿಗೆಯನು ಹೊತ್ತ
ಭೂಮಿತಾಯಿ ಜೋಗಿತಿ,
ಮೈಕತುಂಬಿ ಕುಣಿಯುತಿಹಳ-
ನಂತಕಾಲವೀಗತಿ.

ಎಷ್ಟು ಹೋಲಿಕೆಯನು ಕೊಟ್ಟು
ಹೊಗಳಿ ಮನವು ತಣಿಯದು;
ರೂಪಗಳಿಗೆ ಚಿತ್ರಗಳಿಗೆ
ಉಪಮೆಗಳಿಗೆ ಗಣಿಯಿದು.

ಹೂತಽದ ಹುಣಸಿ

ಹೂತಽದ ಹುಣಸಿಯಾ ಚಿಗುರು
ಮದರಂಗಿ ಬಣ್ಣದುಗುರು
ರುಚಿಗೆ ಹುಳಿಯೊಗರು
ನೋಡ್ಯೆ ಜೀವಕ್ಕನಿಸಿತಽ ಹಗರು ॥ ಹೂತಽದ

ಉಗುರ್ಗೆಂಪು ಹಸಿರು ಬಿಳಿನಿಂಬಿ
ಹುಣಸಿಯಾ ರೆಂಬಿ
ಚಿಗತೀತೇನೊ ಎಂಬಿ
ಕಾಮುಽನ ಬಿಲ್ಲಿನ ಕೊಂಬಿ ॥ ಹೂತಽದ

ಬ್ಯಾಸಿಗಿ ಹೊಡೆದಽದ ಬಿಸಿಲಿನ ಡೇರೆ
ಮಧ್ಯಾನ್ನದ ಪಾಹರೆ
ಯಾರಿಗಿಲ್ಲ ಹ್ವಾರೆ
ಸದ್ದು ಸುಳಿವು ಇಲ್ಲ ಬ್ಯಾರೆ ॥ ಹೂತಽದ

ಸುಳ್ಳ ಸುಳ್ಳ ಗಾಳಿ ಹಾಕಿತ ಸಿಳ್ಳು
ಕಾಗಿ ಚುಂಚಿನ ಹಳ್ಳು
ಬಿದ್ದು ಅಂತ್ಯು 'ಹೊಳ್ಳು'
ಮೈ ಚಾಚ್ಯಽದ ಹುಣಸಿಯು ನೆಳ್ಳು ॥ ಹೂತಽದ

ಅಡ್ಡಾಗತೇನಿ ನೆಳ್ಳಾಗ ಹೀಂಗ
ಹೂವು ಚಿಗುರು ಹ್ಯಾಂಗ
ಅವಽ ಹಾಸಿಧಾಂಗ
ಹುಳಿ ಚಿಗುರು ನುರಿಸಿ ನಾ ದಂಗ ॥ ಹೂತಽದ

ಬಿಸಿಲ್ಬುದರಿ ಕುಣಿಯುಲಿ ದೂರ
ಯಾರಿಗೆ ಬೇಕು ನೀರ
ಹೀಂಗ ನನ್ನಿದಿರ
ಕಣ್ಣಾಳತಿಯೊಳಗ ನಿ ಬಾರ ॥ ಹೂತಽದ

ಹಾರತಿರಲಿ ಗಾಳಿಗೆ ಬಿಚ್ಚಿದ್ದೆರಳು
ವಾರಿಯಿರಲಿ ಕೊರಳು
ಬಾಚತಿರಲಿ ಬೆರಳು
ನೋಡ್ತೇನಿ ನಿನ್ನ ಕವಿನೆರಳು ॥ ಹೂತಽದ

ಕಣಕಣ್ಣ ಚಕಮುಕಿ ಇತ್ತ
ಕುಡಿಗಣ್ಣಿನತ್ತ
ತಾಕಿ ಹಾರಿತ್ತ
ಗಾಳಿ ಸವಾರಿಗ್ಹೊರಟಿತು ಚಿತ್ತ ॥ ಹೂತsದ

ಆಗೊ ಗಾಳಿ ಧೂಳಿಯಾ ಬಂಬಾ
ನಿಂತಾಂಗ ಆದ ಖಂಬಾ
ಅಲ್ಲಿ ರೌದಿ ತುಂಬಾ
ಗಣಿ ಕುಣಿಧಾಂಗ ಡೊಂಬರ ರಂಭಾ ॥ ಹೂತsದ

ವ್ಯಾಲೆ ಅಲ್ಲಿ ಪಾರಿವಾಳ ಜೋಡಿ
ಒಂದಕ್ಕೊಂದ ನೋಡಿ
ಬಿಸಿಲ ತೆರೆ ದೂಡಿ
ಹಾರ‍್ತsದ ನೀಲಿಮುಗಿಲ್ಹೊಕ್ಕಡಿ ॥ ಹೂತsದ

ಕಂಡಂಗಾತು ನೀರಿನ ಕೊಳ
ನೀಲಿ ಮುಗಿಲ ಜಳಾ
ಎಂಥ ಝುಳ ಝುಳಾ
ಮುಳುಮುಳುಗಿ ಹೋತು ಮನದ ಧೂಳಾ॥ ಹೂತsದ

ಕಾಲ ಹೋಗತಿತ್ತ ಹಿಂದ ಸರಿದು
ಮನಸು ಆತ ಬರಿದು
ಮಧ್ಯಾನ್ ಬ್ಯಾಸರ ಮುರಿದು
ಬಿಸಿಲ ತಾನsಹೋಗತಿತ್ತ ಹರಿದು ॥ ಹೂತsದ

ಕವಿ ಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ?
ಒಂದು ಹೂತ ಹುಣಿಸಿಮರ ಸಾಕ ॥ ಹೂತsದ

ಚಿತ್ತಿಯ ಮಳೆಯ ಸಂಜೆ

ಕುರುಡು ಪ್ರಿತಿಯ ಹಾಂಗ
ಕುರುಡು ಚಿತ್ತಿಯ ಮಳೆಯು
ಮುಗುಳು ನಗಿ ಸುತ್ತುರುಳಿಸಿ
ಸುರದಽತ್ತ ಸುರದಾವ.

ಎತ್ತೇನೋ ಬಿತ್ತೇನೊ
ಮಿಂಚಿನ ಮುತ್ತೇನೊ
ಕಣ್ಮುಚ್ಚಿ ತೆರವುದರಾಗ
ಹರದಾಽರಿಗೆ ಹರದಾವ.

ಇದಿರು ಗುಡ್ಡದ ತಲೆಗೆ
ಮೋಡ ಮುಸುಕೆಳೆವಾಗ
ಬದಿಯ ಗುಡ್ಡದ ಮ್ಯಾಲೆ
ಬಿಸಿಲು ಮೈ ಚ್ಯಾಚಾವ.

ತೋಪು ತೋಟದ ಗಾಳಿ
ಸುಗ್ಗಿ ಸುಸುಳಿ ಬಂದು
ಹುಲ್ಲುಗಾವಲಾ ಸವರಿ
ಬೈತಲಾ ಬಾಚ್ಯಾವ.

ಗಿಡಬಳ್ಳಿ ಎಲಿ ಎಲಿ
ತೊಯ್ದು ತೆಂಗಿನ ಗರಿ
ಬೆಳ್ಳಿಸುಳಿ ಬರೆದಾಂಗ
ಮಿಂತಿಮೀಽರಿ ಮಿಂಚ್ಯಾವ.

ಪಡುವಲಕ ಮುಗಿದ ಕಿರಣ
ಮೂಡಲಕ ಚಿಮ್ಮಿಕೊಂಡು
ಅರಿಷಿಣ ಕುಂಕುಮ ತಂದು
ಮರದ್ಹಣಿಗೆ ಹಂಚ್ಯಾವ.

ಸಂಜಿ ಸೂರ್ಯಾನ ಹೆಗಲ
ಜರದ ಸೆಲ್ಲೇದ ಸೋಗಿ
ನವಿಲಗೊರಳಿನ ಮುಗಿಲ
ಸೆರಿಗ್ಗೆ ಬೀಸ್ಯಾವ.

ಹೊಲದಂಚಿನ ಹಸಿರ ಬಯಲು
ಮುತ್ತಿನ ಸೇಸೆ ತಳಿದು
ದುಡಿದವರ ಪಾದಕ್ಕಂತ
ಹಡದಿ ಹಾಸ್ಯಾವ.

ದಿನಗೂಲಿಗೆ ದುಡಿದು ದಣಿದು
ತಣಿದು ಹೊರಟವರ ಮಾರಿ
ಎದಿಯೆತ್ತರ ಬೆಳೆಗೆ ಕಳಸ
ಇಟ್ಟಾಂಽಗ ಮೆರೆದಾವ.

ಹದಕ್ಕ ಹವಣಾಗಿ ಬಂದ
ಮಳೆಗೆ ನೆನೆನೆನೆದು ನೆನಿಸಿ
ಬರುವ ಸುಗ್ಗಿಯ ಚಿತ್ರ
ಅವರ ಚಿತ್ತ ಬರೆದಾವ.

ಗದ್ದ ಗಲ್ಲದ ಹಂಚಿ
ಕಣ್ಣೋಗಿ ಹಸಿರ ಹಣಿ
ಇಳಿದ ಬೆವರಿನ ಸಡುವೆ
ತೊಳೆದು ಎದ್ದಾವ.

ಸಿಂಗಾರಿಲ್ಲದೀ ಸೊಬಗು
ಸೊಗಸಿ-ಜೀವಕೆ ಮುದ್ದು;
ಸೋತ ದಾರಿಗರ ಕಣ್ಣು
ಮನಸು ಕದ್ದಾವ.

ಚವರಿ ಜೋಳದ ತೆನೆಯೆ
ಎರಡು ಬದಿಗೆ ಸರಿದು
ಅವರ ಮುಖರೇದ ಮುಖಕೆ
ಚವರ ಹಿಡಿದಾವ.

ಹಗಲು ಮಲ್ಲಾಡಕೆ ಕಳೆದು
ಇರುಳು ವಸತಿಗಂತ
ಬೆಳ್ಳಕ್ಕಿ ತೋರಣಗಟ್ಟಿ
ಬೆಳವಲಕ್ಕೆ ನಡೆದಾವ.

ಬಯಲು-ಗುಡಿಸಲದ ಜೀವ
ಕಾಡು-ಗೂಡಿನ ಹಕ್ಕಿ
ತಮ್ಮ ಸರಿಜೋಡಿ ಮಾಡಿ
ಸೋಬಾನೆ ಹೇಳ್ಯಾವ.

ಮುಚ್ಚಂಜೆ ಮುಗಿದಾಗ
ಸೀಗಿಗೌರಿಯ ದನಿಯೆ
ತೇಲಿ ಬರುವಂತೆ ನಾಡು
ಕಿವಿಯಾಗಿ ಕೇಳ್ಯಾವ.

ರಾಧೆಯ ಪಾಡು

(ಸಖಿ) 'ಮುಂದೇನೆ?। ಸಖಿ। ಮುಂದೇನೆ? ॥ ಪ ॥'

(ರಾಧೆ) 'ರೂಪ ಗುಣಕೆ ಮೆಚ್ಚಿ
ಬಂದನೆಂದೆನು ಹುಚ್ಚಿ
ಅಂದೆನೇ। ಮನದಿ? ಅಂದೆನೇ'

'ಸಖಿ ಮುಂದೇನೆ?। ಸಖಿ....'

'ಕಾಣುವಂತಹನಲ್ಲ
ಕಾಣದಾದನು ಗೊಲ್ಲ
ಚೆಂದೇನೆ?। ಇದು ಚೆಂದೇನೇ?'

'ಸಖಿ। ಮುಂದೇನೆ?। ಸಖಿ....'

‘ ಇವನ ಪಂಥವ ತೊಟ್ಟು
ಬಳಗವೆಲ್ಲವ ಬಿಟ್ಟು
ಬಂದೆನೇ । ಅಲ್ಲಿ ಬಂದೆನೇ ’

‘ ಸಖಿ । ಮುಂದೇನೆ? ಸಖಿ.... ’

‘ ಒರೆದೆಸಂಗsಲಾಚಿ
ಕರೆದೆ ಜೀವವ ಚಾಚಿ
ನೊಂದೆನೇ । ಬಹಳ ನೊಂದೆನೇ ’

‘ ಸಖಿ । ಮುಂದೇನೆ? ಸಖಿ.... ’

‘ ಬರನು, ಕೂತಿತು ಧನಿ
ಕಣ್ಣೆಲ್ಲ ಕಂಬನಿ
ತಂದೆನೇ । ಕರಗಿ ತಂದೆನೇ ’

‘ ಸಖಿ । ಮುಂದೇನೆ? ಸಖಿ.... ’

‘ ಕರಣ ಕಳವಳಿಸೀವೆ
ಹರಣ ತಳಮಳಿಸೀವೆ
ಒಂದೇನೇ?। ಸ್ಥಿತಿ ಒಂದೇನೇ?’

‘ ಸಖಿ । ಮುಂದೇನೆ? ಸಖಿ.... ’

‘ ಒಗೆದು ಹೂ ದಂಡಿಗೆ
ಯಮುನೆಯ ದಂಡಿಗೆ
ನಿಂದೆನೇ । ದುಃಖಿ ನಿಂದೆನೇ ’

‘ ಸಖಿ । ಮುಂದೇನೆ? ಸಖಿ.... ’

‘ ಹೊಳೆಯೊಳು ಹೊತ್ತಾರೆ
ಧುಮುಕಿ ನಾ ಸತ್ತಾರೆ
ಹೊಂದೇನೇ?। ಅವನ ಹೊಂದೆನೇ?’

‘ ಸಖಿ । ಮುಂದೇನೆ? ಸಖಿ.... ’

‘ನಲ್ಲ ತೋರಿಸಿ ಕೊಡು
ಬೇಕಾದ ವರ ಬೇಡು
ಅಂದೇನೇ ?। ಸಖಿ ಅಂದೇನೇ ’

‘ಸಖಿ। ಮುಂದೇನೆ? ಸಖಿ....’

ಬಂತು ಚೆಲ್ವಿನ ತಿರುಳು
ಕೃಷ್ಣರಾಯನ ನೆರಳು
ನೋಡಿ ಅವಳ ಕರುಳು
ತೀಡಿ ಅವಳ ಕುರುಳು
ಪಿಡಿಯೆ ಅವಳ ಬೆರಳು
ಹೊಡೆಯೆ ಕಾಮನ ಸರಳು

‘ಇಂದೇನೇ। ಎಂದಳು ಎಂದೇನೇ ’

‘ಸಖಿ। ಮುಂದೇನೆ? ಸಖಿ। ಹಿಂದೇನೆ?’

ಮನೆಗೆ ಹೋಗವ್ವಾ !

ಬಂದೆವ್ವಾ ಕಾಮ ಹೊಟ್ಟೆಯೊಳಿಟ್ಟು
ನಿಂದೆವ್ವಾ ನೀರೆ, ನಾಚಿಕೆ ಬಿಟ್ಟು
ಮುಂದವ್ವ ನೀನು ಇಂದಿನ ತೊಟ್ಟು
  ನೀಗವ್ವಾ ! ಅದನ ನೀಗವ್ವಾ
  ಹೇ ! ಹೋಗವ್ವಾ ! ಮನೆಗೆ ಹೋಗವ್ವಾ !

ಕಣ್ಣವ್ವಾ! ಎಂಥ ಕ್ರೋಧಾ ತಳೆದೆ
ಮಣ್ಣವ್ವಾ! ಮಿಂಚು ಮೈಯಾ ಬೆಳೆದೆ
ಹೆಣ್ಣವ್ವಾ! ನೀನು ಹೆಣ್ಣೊಳು ಹೊಳೆದೆ
ಸಾಗವ್ವಾ। ಮುಂದೆ ಸಾಗವ್ವಾ
ಹೇ। ಹೋಗವ್ವಾ। ಮನೆಗೆ ಹೋಗವ್ವಾ!

ಬೇಡವ್ವಾ ಒಳಗೆ ಮತ್ಸರವೆಂಬೀ
ನೋಡವ್ವಾ ಕಾಳವಿಷವು ತುಂಬೀ
ಕೋಡವ್ವಾ ಇಲ್ಲಿ ಒಡೆಯಿತು, ನಿಂಬೀ-
ನಾಗವ್ವಾ। ನೀನು ನಾಗವ್ವಾ
ಹೇ। ಹೋಗವ್ವಾ। ಮನೆಗೆ ಹೋಗವ್ವಾ!

ಬೇಕವ್ವಾ ದೈನ್ಯ ಬಿಂಕದ ತಾಯಿ
ಯಾಕವ್ವಾ ತೆರೆವಿ ತೊಂಡಿಲಬಾಯಿ
ಸಾಕವ್ವಾ ಮನವು ಮಾವಿನಕಾಯಿ
ಮಾಗವ್ವಾ। ಇನ್ನು ಮಾಗವ್ವಾ
ಹೇ। ಹೋಗವ್ವಾ। ಮನೆಗೆ ಹೋಗವ್ವಾ!

ಮಿರವ್ವಾ ಬೇಡ ಈಗಿನ ನಡಿಗೆ
ಕಾರವ್ವಾ ಡಂಭ ಕಾರುತ ಕಡೆಗೆ
ಸೇರವ್ವಾ ನೀನು ಪ್ರಭುವಿನ ಅಡಿಗೆ
ಬಾಗವ್ವಾ। ಅದಕ ಬಾಗವ್ವಾ
ಹೇ। ಹೋಗವ್ವಾ। ಮನೆಗೆ ಹೋಗವ್ವಾ!

ಆರವ್ವಾ ಕಡೆಯು ಮೋಹವ ಹಿಡಿದು
ಬೇರವ್ವಾ ಎಲ್ಲ ಕೂಡಲೆ ಕಡಿದು
ಆರವ್ವಾ ಪರಮಪದವ ನುಡಿದು
ಬೇಗವ್ವಾ। ಬಾರೆ ಆಗವ್ವಾ
ಹೇ। ಹೋಗವ್ವಾ। ಈಗ ಹೋಗವ್ವಾ!

ಹುಬ್ಬಳ್ಳಿಯಾಂವಾ

ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ
ವಾರದಾಗ ಮೂರಸರತಿ ಬಂದು ಹೋದಾಂವಾ ॥ ಪಲ್ಲ ॥

ಭಾರಿ ಜರದ ವಾರಿ ರುಮ್ಮಾಲಾ ಸುತ್ತಿಕೊಂಡಾಂವಾ
ತುಂಬ-ಮೀಸಿ ತೀಡಿಕೋತ ಹುಬ್ಬ ಹಾರಸಾಂವಾ
ಮಾತುಮಾತಿಗೆ ನಕ್ಕನಗಿಸಿ ಆಡಿಸ್ಯಾಡಾಂವಾ
ಏನೊ ಅಂದರ ಏನೋ ಕಟ್ಟಿ ಹಾಡಡ ಹಾಡಾಂವಾ
ಇನ್ನೂ ಯಾಕ..

ತಾಳೀಮಣಿಗೆ ಬ್ಯಾಳಿಮಣಿ ನಿನಗೆ ಬೇಕೇನಂದಾಂವಾ
ಬಂಗಾರ-ಹುಡೀಲೇ ಭಂಡಾರಾನ ಬೆಳಸೇನಂದಾಂವಾ
ಕಸಬೇರ ಕಳೆದು ಬಸವೇರ ಬಿಟ್ಟು ದಾಟಿ ಬಂದಾಂವಾ
ಜೋಗತೇರಿಗೆ ಮಾಗುತಿ ಅಂತ ನನಗ ಅಂದಾಂವಾ
ಇನ್ನೂ ಯಾಕ..

ಇರು ಅಂದರ ಬರತೇನಂತ ಎದ್ದು ಹೊರಡಾಂವಾ
ಮಾರೀ ತೆಳಗ ಹಾಕಿತೆಂದರೆ ಇದ್ದು ಬಿಡಾಂವಾ
ಹಿಡಿ ಹಿಡೀಲೆ ರೊಕ್ಕಾ ತಗದು ಹಿಡಿ ಹಿಡಿ ಅನ್ನಾಂವಾ
ಖರೇ ಅಂತ ಕೈಮಾಡಿದರ ಹಿಡಸದ ಬಿಡಾಂವಾ
ಇನ್ನೂ ಯಾಕ..

ಚಾಹಾದ ಜೋಡಿ ಚೂಡಾಧಾಂಗ ನೀ ನನಗಂದಾಂವಾ
ಚೌಡಿಯಲ್ಲ ನೀ ಚೂಡಾಮಣಿಯಂತ ರಮಿಸ ಬಂದಾಂವಾ
ಬೆರಳಿಗುಂಗರಾ ಮೂಗಿನಾಗ ಮೂಗಬಟ್ಟಿಟ್ಟಾಂವಾ
ಕಣ್ಣಿನಾಗಿನ ಗೊಂಬೀಹಾಂಗ ಎದ್ಯಾಗ ನಟ್ಟಾಂವಾ
ಇನ್ನೂ ಯಾಕ..

ಹುಟ್ಟಾ ಯಾಂವಾ ನಗೀಕ್ಯಾದಿಗೀ ಮುಡಿಸಿಕೊಂಡಾಂವಾ
ಕಂಡ ಹೆಣ್ಣಿಲೆ ಪ್ರೀತೀ ವೀಳ್ಯೆ ಮಡಿಚಿಕೊಂಡಾಂವಾ
ಜಲ್ಮಜಲ್ಮಕ ಗೆಣ್ಯಾ ಆಗಿ ಬರತೇನಂದಾಂವಾ
ಎದಿಮ್ಯಾಗಿನ ಗೆಣತಿನ ಮಾಡಿ ಇಟ್ಟಕೊಂಡಾಂವಾ
ಇನ್ನೂ ಯಾಕ..

ಸೆಟ್ಟರ ಹುಡುಗ ಸೆಟಗೊಂಡ್ಹೋದಾ ಅಂತ ನನ್ನ ಜೀಂವಾ
ಹಾದೀಬೀದೀ ಹುಡಕತೈತ್ರೀ ಬಿಟ್ಟ ಎಲ್ಲಾ ಹ್ಯಾಂವಾ
ಎಲ್ಲಿ ! ಮಲ್ಲಿ ! ಪಾರೀ ! ತಾರೀ ! ನೋಡೀರೇನವ್ವಾ ?
ನಿಂಗೀ ! ಸಂಗೀ ! ಸಾವಂತರೀ ! ಎಲ್ಲಾ ಹ್ನ ನನ್ನಾಂವಾ ?
ಇನ್ನೂ ಯಾಕ ಬರಲಿಲ್ಲಾ ?

ನಲ್ಲನಲ್ಲೆಯರ ಲಲ್ಲೆ

ನಲ್ಲೆ! ನಿನ್ನ ಲಲ್ಲೆವಾತು
ಮುಗುಳುನಗೆಯುಲಲ್ಲೆ ಹೂತು
ಸೋತು, ಓತು, ಬಂತು, ಹೋ'ತು
ನಲ್ಲೆ, ನಿನ್ನ ಲಲ್ಲೆವಾತು.

ನಲ್ಲ! ನಿನ್ನ ಲಲ್ಲೆವಾತು
ಮೀಸೆಕುಡಿಯುಲಲ್ಲೆ ಹೂತು
ಕುಣಿದು, ಮಣಿದು, ಬಂತು, ಹೋ'ತು
ನಲ್ಲ, ನಿನ್ನ ಲಲ್ಲೆವಾತು.

ನಲ್ಲೆ! ನಿನ್ನ ಲಲ್ಲೆವಾತು
ಕಣ್ಣಕಿರಣದಲ್ಲಿ ನೂತು
ನೇತು, ಜೋತು, ಬಂತು, ಹೋ'ತು
ನಲ್ಲೆ, ನಿನ್ನ ಲಲ್ಲೆವಾತು.

ನಲ್ಲ! ನಿನ್ನ ಲಲ್ಲೆಮಾತು
ಹುಬ್ಬು-ಬಿಲ್ಲಿನಲ್ಲೆ ಆತು
ಸಿಡಿದು, ಮಿಡಿದು, ಬಂತು, ಹೋ'ತು
ನಲ್ಲ, ನಿನ್ನ ಲಲ್ಲೆಮಾತು

ನಲ್ಲೆ! ನಿನ್ನ ಮಾತಿನಲ್ಲೆ
ಹುಟ್ಟಿಬಂತು ಹುಟ್ಟು-ಲಲ್ಲೆ;
ಹೂಂಗುಟ್ಟಿ ಹುದುಗಬಲ್ಲೆ,
ಒಲ್ಲೆಯೆಂದು ಒಲಿಸಬಲ್ಲೆ.

ನಲ್ಲ! ನಿನ್ನ ಮಾತಿನಲ್ಲೆ
ಎದೆ ಮೃದಂಗದೊಂದೆ ಸೊಲ್ಲೆ
ಹುಚ್ಚು ಹಿಡಿಸಿ ನುಡಿಸಬಲ್ಲೆ;
ಹಿಡಿದ ಹುಚ್ಚು ಬಿಡಿಸಬಲ್ಲೆ.

ನಲ್ಲೆ! ನೀನು ಮಲೆಯ ಮೊಲ್ಲೆ
ನಿನ್ನ ಮೃದು ಸುಗಂಧ ಲಲ್ಲೆ;
ಅದರ ಸವಿಯ ಧ್ಯಾನದಲ್ಲೆ
ಏಕತಾನಮಾನವಲ್ಲೆ?

ನಲ್ಲ! ನಿನ್ನ ಉಸಿರಿನಲ್ಲೆ
ಗಾನದೊಂದು ಗಮಕವಿಲ್ಲೆ?
ಆ ಪ್ರಾಣವಿಲ್ಲದಲ್ಲೆ
ಗಾಳಿಮಾತು ಜೊಳ್ಳು ಲಲ್ಲೆ!

ಬಾನು ಬೆಳಕ ಹೂಡಿದಲ್ಲೆ
ಕಡಲಿನಲ್ಲಿ ಮೂಡಿದಲ್ಲೆ;
ನಲ್ಲ ನಲ್ಲೆ ಕೂಡಿದಲ್ಲೆ
ಹಿಗ್ಗಿಗುಂಟೆ ಮೇರೆ ಎಲ್ಲೆ?

ಚಿರಂತನ

ಆ ಮುಖಾ—ಈ ಮುಖಾ
ಯಾವ ಗಂಡೊ
ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ
ಕೂಡಿಸಿತ್ತು
ಆಡಿಸಿತ್ತು
ಕೂಡಲದೊಲು ನೋಟವಾ
ಮೂರು ದಿನದ ಆಟವಾ

ಸಖೀಗೀತ

ಆ ಮುಖಾ—ಈ ಮುಖಾ
ಹೆತ್ತುದೊಂದು
ಹೊತ್ತುದೊಂದು
ಎಂಥ ಹ್ವಾಸ್ಯದೀ ಸುಖಾ
ಬೆರಕೆಯಿಂದೊ
ಎರಕದಿಂದೊ
ಬಂತು ಬೇರೆ ಜೀವನಾ
ಕೃಪೆಯೊ ಕಾಮದೇವನಾ

ಆ ಮುಖಾ—ಈ ಮುಖಾ
ಒಂದು ಸತ್ತು
ಒಂದು ಅತ್ತು
ಒಂದಕೊಂದು ಸಮ್ಮುಖಾ
ಬೇರೆ ಬತ್ತಿ
ದೀಪ ಹತ್ತಿ
ಬೆಳಗುತಿಹುದು ಸ್ನೇಹವಾ
ತುಂಬಿ ಬೇರೆ ದೇಹವಾ

ಆ ಮುಖಾ—ಈ ಮುಖಾ
ಇದ್ದು ಅಂತ
ಆಯ್ತು ಸಂತ
ಒಗೆತನದೀ ಒಮ್ಮುಖಾ
ಅಂಟಿಗಂಟು
ಚಿಗಿತು ನಂಟು
ಇದುವೆ ನಿತ್ಯನೂತನಾ
ಸಂತತಿಯೆ ಚಿರಂತನಾ

ಪುಟ್ಟ ವಿಧವೆ

ಆಕೆಯಿದ್ದಳು ಕೂಸು; ಈತನಿನ್ನೂ ಹುಡುಗ.
ಅವರ ತಾಯ್ತಂದೆಗಳ ಹಿಗ್ಗು ಎಷ್ಟು!
ಧರ್ಮದಾ ಹೆಸರಿನಲಿ ಅವರ ಕೈಕೂಡಿಸಲು
ಇವರಿಗೆನಿಸಿತು ಹರ್ಷ ಹಬ್ಬದಷ್ಟು.

ಕೊರಳ ಕರಿಮಣಿ, ಗಲ್ಲದರಿಷಿಣವು ಮುಗಬೊಟ್ಟು
ಆ ಮೇಲೆ ಉದ್ದು ಕುಂಕುಮದ ಅಂದ!
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗದಾಡೆ
ಅಷ್ಟೆ ಕಂಡಿತು ಕಣ್ಣಿಗೆಷ್ಟೊ ಚಂದ.

ಆಕೆ ದೊಡ್ಡವಳಾಗಿ, ಈತ ಚಿಕ್ಕವನಿದ್ದು
ಶೋಭನವ ಮಾಡಿದ್ದು ಊರಿಗಾಟ!
ಪೆಚ್ಚುನೋರೆಯ ಅಳಿಯ-ದೇವರಿದಿರಲಿ ಜನಕೆ
ಕಡಿಮೆ ಸಿಹಿಯೆನಿಸಿತ್ತೆ ಪ್ರಸ್ತದೂಟ?

ವರ್ಷವೆಂಬುದರೊಳಗೆ ಚೊಚ್ಚಿಲದ ಸಂಭ್ರಮವು!
ದೈವದಾಟವು ಎಂದಿತಿಡಿಯ ಊರು.
ಮಗನು ಬಂದಿರೆ ಇಹಕೆ, ತಂದೆ ಏರಿದ ಪರಕೆ;
ಕ್ಷೀರಸಾಗರವಾಯ್ತು ಉಪ್ಪುನೀರು.

ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿದಿತು; ತಾಯಿಗುಳಿದಿತೇನು?
ಮೈ-ಗೋರಿಯಲಿ ಮಡಗಿ ಜೀವ ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು.

ಸತ್ತೆನೆಂದಳು ಕೂಸು-ತಾಯಿ ಆಯ್ಯೋ ಎಂದು
ಭೋರೆಂದು ಗೋಳಿಟ್ಟು ಹೊಟ್ಟೆ ಹೊಸೆದು
ಹುಚ್ಚೆದ್ದು ಹೌಹಾರಿ ಹುಯ್ಯಲಿಟ್ಟಳು ಆಕೆ
ತನ್ನ ತಾ ಶಪಿಸಿದಳು ಹಲ್ಲು ಮಸೆದು.

ಹತ್ತು ದಿವಸಕೆ ಹಾಳುಮುತ್ತೈದೆತನ ಹೋಗಿ
ವೈಧವ್ಯಸಂಪತ್ತು ಪಡೆದಳಾಕೆ;
ಮನೆಯವರು ವೈದಿಕರು, ಊರು ಧರ್ಮದ ತವರು;
ಶಾಸ್ತ್ರವಿರೆ ಬೇರೆಯ ವಿಚಾರವೇಕೆ?

ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು;
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ.
ಆದರಯ್ಯೋ ಪಾಪ! ಆಕೆಯಿನ್ನೂ ಮಗುವು
ಸಿಂಗಾರವಿರದೆ? ಆ ಮಾತೆ ಬೇರೆ.

ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೊ,
ಹೂಬತ್ತಿ ಹೊಸೆಯಲಿಕೆ ಮೈತಳೆದಳೊ,
ಎಂಬಂತೆ ಬಾಳ ಕಳೆದಳು ಬಾಲೆ; ಹೂಮಾಲೆ
ಮುಳ್ಳುಕಂಟೆಯ ಮೇಲೆ ತಾನೆಳೆದಳೊ!

ನಿಟ್ಟುಸಿರ ಸರದಲ್ಲಿ ಕಂಬನಿಯ ಪೋಣಿಸುತ
ಪುಟ್ಟ ವಿಧವೆಯು ಪುರಾಣಕ್ಕೆ ಬರಲು
ಗುಡಿಯ ಮೂರ್ತಿಗೆ ಮಂಕುಹಿಡಿದು, ಆಚಾರ್ಯರಿಗು
ಉರುಲಿಕ್ಕಿದಂತೆ ಬಿಗಿದಿತ್ತು ಕೊರಲು.

ಕುರುಡುಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈಮರೆತು ನಿಂತಾಗ್ಗೆ ಗೂಗೆ ಹಾಡಿತ್ತು.
ಮುದ್ರೆಯೊತ್ತುವ ಕಣ್ಣು ಮೋರೆ ನೋಡಿತ್ತೊಮ್ಮೆ
ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು!

ಚಿಗರಿಗಂಗಳ ಚೆಲುವಿ

ಚಿಗರಿಗಂಗಳ ಚೆಲುವಿ ಚೆದಽರಿ ನಿಂತಾಳ ನೋಡೋ
ಬೆದಽರಿ ನಿಂತಾಳ   ಪಲ್ಲ ॥

ಹೊಳಿಹಳ್ಳ ತೊರೆದಾವೋ
ಗೆಣೆಹಕ್ಕಿ ಬೆರೆದಾವೋ
ಆಗದವರ ಹೊಟ್ಟಿ ಉರದಾವೋ
ಗೆಣೆಯಾ ಉರದಾವಽ
ಅಂಥವರ ದಿಟ್ಟಿ ಮನಿಮುರದಾವ;
ಅದನ ತಾ ಕಂಡು ಕೊರಗ್ಯಾಽಳೊ
ಮರುಗ್ಯಾಽಳೊ
ಸೊರಗ್ಯಾಽಳೋ
ಹೂ ಕಾಯಿ ಹಣ್ಣು ತುಂಬಿದ ಬನದಾಽಗ ॥ ಚಿಗರಿಗಂಗಳ. .

ಬ್ಯಾಟಿ ನಾಯೊದರ್ಯಾವೋ
ಹಸುಜೀವ ಬೆದರ್ಯಾವೋ
ಗಳಗಳನೆ ಗಿಡದೇಲಿ ಉದರ್ಯಾವೋ
ಗೆಣೆಯಾ ಉದರ್ಯಾವಽ
ದಿನ್ನಿ ಮಡ್ಡಿ ಗುಡ್ಡ ಅದರ್ಯಾವ;
ಅದನ ತಾ ಕಂಡು ನೊಂದಾಽಳೊ
ಬೆಂದಾಽಳೊ
ಅಂದಾಽಳೊ
‘ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲಽ॥ ಚಿಗರಿಗಂಗಳ. .

ಆಳುಗಳ ಹೋರಾಟ
ಆಳುವವರಿಗೆ ಆಟ
ಗಾಳಕ್ಕ ಸಿಕ್ಕ ಮೀನದ ಗೋಳಾಟೊ
ಗೆಣೆಯಾ ಗೋಳಾಟೋ
ಗೆದ್ದವರ ಇದ್ದವರ ಹಾರಾಟ;
ಅರೆಸತ್ತ ಜೀವಾ ಕೊಳೆತಾsವೊ
ಹುಳತಾsವೊ
ಅಳತಾsವೋ
ಹಸುಗೂಸು ತಿರುಗಿ ಹೊಟ್ಟ್ಯಾಗ ಹುಗಿಧ್ಹಾಂಗ ॥ ಚಿಗರಿಗಂಗಳ. .

ತನ್ನ ತಾ ಸುತ್ತ್ಯಾಳೊ
ಹೊತ್ತಿನ ಬೆನ್ಹತ್ತ್ಯಾಳೊ
ತಿಂಗಳನ ಬಗಲಾಗೆತ್ತ್ಯಾಳೊ
ಗೆಣೆಯಾ ಎತ್ತ್ಯಾಳೋ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ;
ನಿಂತ ನೆಲವೆಂದು ಕಡಿಲಾsಕೊ
ಬಡಿಲಾsಕೊ
ಒಡಿಲಾsಕೊ
ಒಡವ್ಯಲ್ಲೋ ಮಗನೇ ಉಸಿರಿದ್ದೊಡಲಂತಾsಳೋ॥ ಚಿಗರಿಗಂಗಳ. .

ಬೈರಾಗಿಯ ಹಾಡು

ಇಕೋ ನೆಲ—ಅಕೋ ಜಲ
ಆದರ ಮೇಲೆ ಮರದ ಫಲ
ಮನದೊಳಿದೆ ಪಡೆವ ಛಲ
ಬೆಳೆವಗೆ ನೆಲವೆಲ್ಲ ಹೊಲ
ಜಲಧಿವರೆಗು ಒಂದೆ ಕುಲ
ಅನ್ನವೆ ಧರ್ಮದ ಮೂಲ
ಪ್ರೀತಿಯೆ ಮೋಕ್ಷಕ್ಕೆ ಬಲ
ಇದೇ ಶೀಲ ಸರ್ವಕಾಲ ॥ ಇಕೋ ನೆಲ..

ಧಾರವಾಡದ ತಾಯಿ

ನಿನ್ನ ಕಣ್ಣ-ಕಡೆಗೋಲಿಂದ
ನನ್ನ ಹೃದಯ ಕಡೆಯೇ ತಾಯಿ
ಎನ್ನ ಹೃದಯ ಕಡೀ..
ಬೆಣ್ಣೆ ಮೇಲೆ ತೇಲಿಸಿ ತಂದು
ನಿನ್ನ ಬಾಯ್ಗೆ ಹಿಡೀಯೆ ತಾಯಿ
ನೀನೆ ಬಾಯ್ಗೆ ಹಿಡೀ ॥ ಪಲ್ಲ ॥

ಧಾರವಾಡದ ತಾಯೇ । ನನಗಾ- । ಧಾರ ನಿನ್ನದಲ್ಲದಿಲ್ಲ
ಭಾರ ನಿನ್ನ ಮೇಲೆ ಇರಲು । ಯಾರಿಗಾರು ಎಂಬರೇನೇ?
ಎನ್ನ ಹೃದಯ ಕಡೀ..

ಕಾಮಮೆತ್ತಿ ಬತ್ತಿದ ಮನಕೆ । ನೇಮ ನಿತ್ಯ ಬಂತೆಲ್ಲಿಂದ
ಪ್ರೇಮವಾಹಿನಿ ನೀ ಹರಿಯುದಲೆ । ತಾಮಸ ತಾ ಹರಿದೀತೇನೇ?
ಎನ್ನ ಹೃದಯ ಕಡೀ..

ಗಂಗೆ ನೀನು ಗೌರಿ ನೀನು- । ತ್ತುಂಗ ದುರ್ಗದ ದುರ್ಗೆ ಮತ್ತೆ
ತುಂಗಭದ್ರೆ ಶಾಲ್ಮಲೆ ನೀನ- । ಭಂಗವಾಗಿ ಹರಿ ನನ್ನಲ್ಲಿ
ಎನ್ನ ಹೃದಯ ಕಡೀ..

ಅಂಬಿಕಾತನಯನು ನಿನ್ನ । ನಂಬಿ ಇನ್ನೂವರೆಗೂ ಇರುವ
'ಜಂಭ ನೀನೆ ಕಾಯಿ' ಎಂದು । ತುಂಬಿ ನಿನ್ನಡಿದಾವರೆಗಾದಾ
ಎನ್ನ ಹೃದಯ ಕಡೀ..

ಸಖೀಗೀತ

*

(ಕುಣಿತದ ಹಾಡು)

*

ಪೂರ್ವಾನುರಾಗ

ಮೊದಲ ಮಾತು

ಈ ಗೀತದಲ್ಲಿ ನನ್ನ ಜೀವನಕಥೆಯ ಹಂದಿರದ ಮೇಲೆ ಸಾಮಾನ್ಯ ಸಂಸಾರದ ಸುಖ-ದುಃಖದ ಹಂಬನ್ನು ಹಬ್ಬಬಿಟ್ಟಿದ್ದೇನೆ. ಹಿಂದೀಯರ ಜೀವನದಲ್ಲಿಯೂ ಕಾವ್ಯದಲ್ಲಿಯೂ ದಾಂಪತ್ಯ-ಪ್ರಣಯಕ್ಕೆ ಸ್ಥಾನ ವಿಲ್ಲ. ಕಾವ್ಯದಂತೆಯೆ ಜೀವನದಲ್ಲಿಯೂ ಪ್ರಣಯದ

ಸಖೀಗೀತ

ವಿಲಾಸವು ವೇಶ್ಯಾವಾಟದ ಆವರಣದಲ್ಲಿ ಮಿಂಚಾಡುವದು. ಪಾಶ್ಚಿಮಾತ್ಯರ ಜೀವನದಲ್ಲಿಯೂ ಅವರ ಕಾವ್ಯದಲ್ಲಿಯೂ ಪ್ರಣಯಾರಾಧನವಿಧಿಗೆ ನಿಶ್ಚಿತವಾದ ಕ್ರಮವಿದೆ ಎಂದು ಹೇಳುವದುಂಟು. ಆದರೆ ಈ ವಿಧಾನವು ಸಂಪೂರ್ಣವಾಗಿ ಸತ್ಯವಲ್ಲ. ಯಾವ ವಿಧಿ, ಕ್ರಮಗಳು—ಅಲ್ಲಿ ಇಲ್ಲಿ—ಇರಲಿ ಬಿಡಲಿ, ಮಾನವನ ಅವಿವೇಕ ಸುಳಿದಾಡಿದಲ್ಲೆಲ್ಲ ಪ್ರೇಮದ ಕೊಲೆಯು ಅಯಾಚಿತವಾಗಿ ನಡೆಯುವದು. ಪಾಶ್ಚಿಮಾತ್ಯರ ಪ್ರಣಯ-ಲೀಲೆಯ ಕೊನೆಗೆ ಬರುವ ಮದುವೆಯಲ್ಲಿ ವಿಯೋಗದ ಲಕ್ಷಣವು, ವಿರಹದ ಚಿತ್ರವು, ಪ್ರೇಮದ ಸಮಾಧಿಯು ಕಟ್ಟಿಹೋಗಿದ್ದುಂಟು. ನಮ್ಮಲ್ಲಿ ವಿವಾಹ-ಪೂರ್ವ-ಪ್ರಣಯದ ಸಂಚಾರಿ-ಭಾವಗಳಿಗೆ ಎಡೆಯಿಲ್ಲ; ಮದುವೆಯ ಸ್ಥಾಯಿಯಲ್ಲಿ, ಅನುದ್ದೀಪಕ ಏಕಾಂತ ಗುಹೆಗಳಲ್ಲಿ ರತಿಯು ರಸಾಪೇಕ್ಷೆಯಿಂದ ನವೆಯಬೇಕು. ಪಾಶ್ಚಿಮಾತ್ಯರಲ್ಲಿ ಕುರುಡು

ಕಾಮನಿಗೆ ಸ್ವೈರಸಂಚಾರವಿದ್ದರೂ ರತಿಗೆ ಮಾತ್ರ ಋತು-ಋತು ವಿಗೂ ಮರಣಭಯ ತಪ್ಪಿಲ್ಲ. ನಮ್ಮಲ್ಲಿಯೊ ಕಾಮನು ಅನಾದಿಕಾಲ ದಿಂದ ಅನಂಗನಾಗಿರುವದರಿಂದ ರತಿಯ ವಿಲಾಪಾಶ್ರುಗಳಿಂದಲೆ ಪ್ರೇಮವಲ್ಲರಿಯು ಕಮರಬೇಕು, ಇಲ್ಲವೆ ದೈವಕೃಪೆಯಿಂದ ಚಿಗುರ ಬೇಕು. ಅಥವಾ ಪತಿಯೊಲವಿಗೆ ಪಣ ತೊಟ್ಟ ಸತಿಯ ಪ್ರಣಯ ಸಾಹಸವೆಲ್ಲ ತಪದ ವೈರಾಗ್ಯ-ವಿಲಾಸವಾಗಿ, ಬೂದಿಯೊಳಗಿಂದಲೆ ಅಡಗಿದ ಬೆಂಕಿಯೆದ್ದಂತೆ ಕೊನೆಗೆ ಏಳಬೇಕು. ಪಾಶ್ಚಿಮಾತ್ಯರ ಸರಸವು ವಿರಸದ ಪ್ರಸ್ತಾವನೆ; ನಮ್ಮ ರಸವೇ ನೀರಸ. ಹೀಗೆ ಸಾಮಾನ್ಯವಾಗಿ ತೋರಿದರೂ ಹಿಂದೀಯರ ವೈವಾಹಿಕ-ಜೀವನವೇ ಸಂಸ್ಕಾರವಂತರ ಮನೆಗಳಲ್ಲಿ ಜೀವಮಾನದುದ್ದಕ್ಕೂ ಪ್ರಣಯ ಪರಿಪಾಕದ ರೀತಿಯಾಗಿಯೇ ಇದೆ. ಅಗ್ನಿಸಾಕ್ಷಿಯಾಗಿ, ದಾನವಾಗಿ ಬಂದ ಕನ್ನೆಯನ್ನು ಸ್ನೇಹದ ಅಭ್ಯಾಸದಿಂದ, ಸುಖದುಃಖಗಳಲ್ಲಿ ಸಮಭಾಗಿಯಾಗುವ ಸಹಾನುಭೂತಿಯ ಅಂತಃಕರಣದಿಂದ ಸಖಿ-ಯನ್ನಾಗಿ ಮಾಡುವ ಕ್ರಮವೊಂದು ಎಡೆಬಿಡದೆ ಸಾಗಿರುವದು. ಆ ಕ್ರಮದಲ್ಲಿ ಸ್ನೇಹದ ವಿವಿಧ ರೂಪಗಳೂ ತಮ್ಮ ತಮ್ಮ ಪಾತ್ರವನ್ನಾಡಿ ನಾಯಕಪಾತ್ರಕ್ಕೆ ರಸಭಾವಗಳ ಪ್ರಭಾವಲಯವನ್ನು ಕಟ್ಟುವವು. ಅಂತಹ ಚಿತ್ರವೊಂದು ಸಖೀಗೀತದಲ್ಲಿದೆ.

ಕಾವ್ಯನಾಯಕನು ತನ್ನ ಸಖಿಗಾಗಿ ತಮ್ಮ ಜೀವನ-ಪೂರ್ವ-ಭಾಗದ ಸ್ಮೃತಿಗಳನ್ನು ಹಾಡಲುದ್ಯುಕ್ತನಾಗಿದ್ದಾನೆ. ಮದುವೆಯ ದಿನದ ಸಂಜೆಯ ಸ್ಮೃತಿಯಿಂದ ಗೀತವು ಪ್ರಾರಂಭವಾಗುವದು.

ಕಥೆಯ ಹಂದರ

ಪ್ರಾರಂಭದ ಹುಮ್ಮಸ, ಹೊಸದರ ಹೊಸಹೊಸತನ, ಶೋಭನದ ಶುಭಾವರಣಗಳಲ್ಲಿ ವಿವಾಹಿತ-ಪ್ರಣಯವು ಪ್ರಸ್ತಾವನೆಯನ್ನು ಹಾಕುವದು. ಅಕಲ್ಪಿತವಾದ ಜೊಚ್ಚಿಲ ಸಂಭ್ರಮ, ಅದು ಕಳೆದುದರಿಂದ ಕಾವ್ಯನಾಯಕನ ತಾಯಿಗೇ ಆದ ಸಂಕಟ, ಸೊಸೆಯ ಮರುಚಲವನ್ನು ಮಗುವಾಗಿ

ಕಾಣುವ ಪೂರ್ವದಲ್ಲಿಯೆ ಆ ತಾಯಿಯು ಸಾವು, ಅದರಿಂದ ದಂಪತಿಗಳು ಎಲ್ಲೆಲ್ಲೋ ಇದ್ದುದು ವಿರಹಸಂಚಾರದ ಸೂಚನೆಯಾಗುವದು. ಹೊಸ ಮಗುವಿನ ಕೂಡ ದಂಪತಿಗಳು ಆಡಿದ ಆಟ, ಕಲಿತ ಪಾಠಗಳು ಕೆಲಕಾಲವನ್ನು ಹೊಸಯಿಸುವವು. ಅದರ ಬೇಸರವೂ ಬರುವದು; ಜೀವನದ ರಮ್ಯತೆ ಏಕೋ ಮಸಕಾಗುವದು. ಕಥೆ ಕಾದಂಬರಿಗಳ ವಾಚನದಿಂದ ಜೀವನವನ್ನುದ್ದೀಪಿಸಿಕೊಳ್ಳುವ ಹವಣಿಕೆ ಬಹಳ ಫಲಕಾರಿಯಾಗುವದಿಲ್ಲ. ಈ ಮಧ್ಯೆ ಮಕ್ಕಳ ಆಗು-ಹೋಗು ಇವರ ವೃತ್ತಿವೀಣೆಯ ಮೇಲೆ ಕೈಯಾಡಿಸುವದು. ಆಗೀಗ ಕಷ್ಟ ಕೆಣಕುವದು; ಆದರೆ ಸುಖವು ಬಂದಾಗ ಅನೇಕಮುಖವಾಗಿ ಬರುವದು. ಮಕ್ಕಳು, ಮನೆ, ಕೆಲಸ, ಗೆಳೆತನ ಎಲ್ಲಕ್ಕೂ ಕಳೆಯೇರುವದು. ಹೊಸ ಮನೆಯ ಹೊಸ ಸೃಷ್ಟಿ ಈ ಸಂಸಾರಕ್ಕೆ ತನ್ನ ಸಂಸ್ಕಾರ ಕೊಡುವದು. ಚಿತ್ತ ಚಿಗುರುವದು; ಕಾವ್ಯವಾಗುವದು. ಆದರೂ ಬಿಗುಮಾನದ ಮೌನವು ಹೃದಯ-ದುರ್ಗದ ದುರ್ಗಮತೆಯನ್ನು ಸಾರುವದು. ಇದೇ ಕಾಲಕ್ಕೆ ಗಾಂಧಿ-ಚಳವಳಿಯಲ್ಲಿ ಕೆಲಸ ಹೋಗಿ, ಬಂದಿವಾಸ ವನವಾಸಗಳಾಗಿ, ಉಳಿದ ಕಾರ್ಯಗಳೂ ಹರಿದು ಹಂಚಿ ಹೋಗುವವು. ದೇಶಾಂತರವಾಗುವದು. ದಂಪತಿಗಳಲ್ಲಿ ಮನೋವ್ಯಥೆಯು ಒಂದು ಸತ್ತ್ವಪರೀಕ್ಷೆಯ ಕಾಲವೇ ಬಂದು ಹೋಗುವದು. ಈ ಕಷ್ಟಕ್ಕೂ ಒಂದು ಸುಖದ ಮುಖವಿತ್ತು. ಆದರೆ ಅದೂ ಬಹಳ ಕಾಲ ಬಾಳಲಿಲ್ಲ. ಹಾದಿಯೇನು ? ಎನ್ನುವ ಹೊತ್ತಿಗೆ ದೈವವು ಸಹಾಯಕವಾಗಿ ಬಂದಿತು. ಕನ್ನಡ ದೇಶಕ್ಕೆ ನಾಯಕ ಬಂದನು. ಮುಂದಿನ ಹಾದಿಯಲ್ಲಿ ಸಖ್ಯವು ಫಲಿಸುವದೆಂಬ ಆಸೆಯಲ್ಲಿ ಸಖೀಗೀತದ 'ಪೂರ್ವಾನುರಾಗ'ವು ಸಮಾಪ್ತವಾಗುವದು. ಹೀಗಿದೆ ಕಥೆಯ ಸಂಚಾರ.

ಈ ಗೀತವನ್ನು ಹೇಳಿ, ಹಾಡಿ, ಕೋಲು ಹಾಕಿ, ದಂಪತಿಗಳು ರಿಂಗಣಗುಣಿತ ಮಾಡಿದಾಗ ಅದರ ಸ್ವಾರಸ್ಯವು ಇನ್ನೂ ಚೆನ್ನಾಗಿ

ತಿಳಿಯುವದೆಂದು ತೋರುವದು. ಮಾತುಗಳನ್ನು ಉದ್ದಕ್ಕೂ ತಾಲ-ಲಯಗಳಿಗೆ ಸರಿಯಾಗಿ ದ್ರುತ ವಿಲಂಬಿತವಾಗಿ ನುಡಿಸಬೇಕು.

ಗೀತವು ಅರ್ಧಕ್ಕೇ ನಿಂತಿದೆ. ಮುಂದಿನ ಭಾಗವನ್ನು ಎಂದು ಬರೆಯಲಾಗುವದೋ, ಬರೆಯುವೆನೋ ಹೇಳಲಾರೆ. ಪ್ರೇಮ-ಪರಮಾತ್ಮನಿಗೆ ಈ ಮಾತಿನ ನೈವೇದ್ಯವು ನಿವೇದಿತವಾಗಿ ಪ್ರೀತಿಯ ಪ್ರಸಾದವು ನನಗೆ ದೊರೆತರೆ ಜೀವಿತಕ್ಕೆ ಧನ್ಯತೆಯ ಮುದ್ರೆ ಬೀಳುವದೆಂದು ನನ್ನ ಹಂಬಲ. ಇದರ ಮೇಲೆ ದೇವರ ಚಿತ್ತ....

ಅಂಬಿಕಾತನಯ ದತ್ತ

ಸಖೀಗೀತ

ಸಖಿ ! ನಮ್ಮ ಸಖ್ಯದ ಆಖ್ಯಾನ ಕಟು ಮಧುರ
ವ್ಯಾಖ್ಯಾನದೊಡಗೂಡಿ ವಿವರಿಸಲೇ
ಕರುಳಿನ ತೊಡಕನು ಕುಸುರಾಗಿ ಬಿಡಿಸಿಟ್ಟು
ತೊಡವಾಗಿ ತಿರುಗೊಮ್ಮೆ ನಾ ಧರಿಸಲೇ
ಇರುಳು ತಾರೆಗಳಂತೆ ಬೆಳಕೊಂದು ಮಿನುಗುವದು
ಕಳೆದ ದುಃಖಗಳಲ್ಲಿ ನೆನೆದಂತೆಯೆ
ಪಟ್ಟ ಪಾಡೆಲ್ಲವು ಹುಟ್ಟು-ಹಾಡಾಗುತ
ಹೊಸವಾಗಿ ರಸವಾಗಿ ಹರಿಯುತಿವೆ.

ಗಂಗೆ ಸಾಗರಬಿದ್ದು ಸಾಗರವಸಪ್ಪುತ
ಅರೆಬೆರೆತ ನೆರೆಬೆರೆತ ತಾಣದೊಲು
ಸುಖದುಃಖ ಸಂಗಮವಾದ ಹೃದ್ರಂಗವು
ಪಾವನವೆಂಬೆನು ಯಾವಾಗಲು
ಬಾ ಅಲ್ಲಿ ಕಡಲಲ್ಲಿ ತೆರೆ ತೆರೆಯ ನೊಡೆವಲ್ಲಿ
ನೀರ್ ಬುರುಗು ಬಿಡುವಲ್ಲಿ ಮೀಯೋಣ ಬಾ
ತೆಪ್ಪವೊ ತಾರಿಯೊ ಹರಗೋಲೊ ಹಡಗವೊ
ತೆರೆ-ತೊಡೆ-ತೊಟ್ಟಿಲನೇರೋಣ ಬಾ.

ಸಪ್ಪೆ ಬಾಳುವೆಗಿಂತ ಉಪ್ಪುನೀರೂ ಲೇಸು
ಬಿಚ್ಚುಸ್ಮೃತಿಗಳ ಹಾಯಿ ಬೀಸೋಣ ಬಾ
ಬೀಸೋಣ ಈಸೋಣ ತೇಲೋಣ ಮುತ್ತಿನ
ತವರ್ಮನೆ ಮುಟ್ಟನು ಮುಳುಗೋಣ ಬಾ
ತಾಂಡವ ನಡೆಸಿದ ಝುಂಝಾವಾತದ
ಕಾಲಿನ ಹುಲುಗೆಜ್ಜೆ ನಾವಾಗಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

“ಮಾಂದಳಿರ ತೋರಣ ಹೂಮಿಡಿ ಗುಡಿಗಟ್ಟಿ
ಮಧುಮಾಸ ಹೊರಟಿತ್ತು ನಿಬ್ಬಣಕೆ
ಚಂದಿರದೇವನ ಮುಗಿಲ ಮಂದಿರದಲ್ಲಿ
ಕಣ್ಣಿದಿರು ಕೌಮುದಿ ಕುಣಿಯುತಿರೆ
ಮಂತ್ರದ ತಂತ್ರದ ಮಂದಿಮಾಳದ ಮದುವೆ
ಸಂದಣಿಯಲಿ ಹೇಗೊ ಮೆರೆಯುತಿರೆ
ಅಂತಃಪಟದಾಚೆ ವಿಧಿ ತಂದ ವಧು ನೀನು
ಮಾಲೆಯ ಸಾವರಿಸಿ ನಿಂತಿದ್ದೀಯೆ.

ಮುತ್ತಿಗು ಮಿಗಿಲಾಗಿ ಹೂವಿಗು ಹಿರಿದಾಗಿ
ಬೆವರ್ಹನಿ ಬಾಸಿಂಗ ತುಳುಕುತಿರೆ
ನತ್ತನು ನಾಚಿಸಿ ಬೆವರಿನ ಹನಿಯೊಂದು
ಮೂಗುಬಟ್ಟಿನ ಅಂದ ಮಿನುಗುತಿರೆ
ಆಟದ ಕನ್ನಿಕೆ ಮಂಗಳ ಲಗ್ನಕೆ
ಮಾಲೆಯನಿಕ್ಕುತ ಮಡದಿಯಾದೆ;
ನಾಟಿಸಿ ಕಣ್ಣೋಟ ಸೋಕಿಸಿ ಕೈಬೆರಳು
ಮರವಟ್ಟ ಮನ-ಬನ ಚಿಗುರಿಸಿದೆ.

ದೈವದ ಪುತ್ಥಳಿ ಮನ ತೆತ್ತ ಮೈವೆತ್ತ
ಮೈಮೆಯ ನಿನ್ನೊಡ ತಂದಿರುವೆ
ಜೀವದ ಭೂಮಿ ನೀ ಮರಿಮಕ್ಕಳನು ಪಡೆದು
ಮನೆತನ ಮುಂದರಿಸ ಬಂದಿರುವೆ
ತನುಮನಧನದಲ್ಲಿ ಪಾಲುಗಾರತಿಯಲ್ಲ
ನೀನೇನೊ ಹಿಗ್ಗಲಿಸ ಬಯಸಿರುವೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಹಸೆಯಲ್ಲಿ ಹುಸಿಯೂಟವಾಡಿಸಿ ನೋಡುತ
ಹಿರಿಯರು ನಲಿನಲಿದಾಡುತಿರೆ
ಮಸೆಸಿದ್ದ ಮರುಕವು ಮಿಂಚುತಲಿದ್ದಿತು
ಹೊಂಚಲಿ ಒಳಸಂಚು ಮಾಡುತಿರೆ
ನೀನು ದೊಡ್ಡವಳಾದೆ ವೈಸಲಿಗೆ ಬೆಳೆಸಿದೆ
ಏಕಾಂತಕೆಳೆಸಿದೆ ಎಳೆ-ಕೆಳದಿಯೆ
ಏನು ಸಂಭ್ರಮವದು ! ಹರೆಯದ ಹಬ್ಬವು
ಕನಸು ಮನಸೂ ಹೆಣೆದು ಬೆಳೆಬೆಳೆದಿವೇ.

ಹೆರಳಿನ ಮಾಲೆಯು ಕಣ್ಣಿನ ಕಾಡಿಗೆ
ತುಟಿಯ ತಂಬುಲ ಉಗುರ ಮದರಂಗಿಯೇ
ಕೊಳಲ ನುಡಿಸುತಿತ್ತು ರಾಗ ಮಿಗುತಲಿತ್ತು
ನಿಂತ ನಿಲುವೆಲ್ಲವೂ ತ್ರಿಭಂಗಿಯೇ
ಕಿವಿಮಾತ ಸೊಗಸೇನು ಆಡಿದ್ದಾಡುವದೇನು
ಹಳೆಸದ ಮುದ್ದಾಟ ಒಸಗುತಿರೆ
ಸವಿ ಬಂತು ಮುನಿಸಿಗು, ಕಳೆ ಬಂತು ಕನಸಿಗು
ಮೋಹದ ನೋಟವನೆಸಗುತಿರೆ.

ಹಗಲೆಲ್ಲೋ ಹಾರಿದವು ಇರುಳೆಲ್ಲ ಜಾರಿದವು
ಋತು ನಿದ್ದೆಯಾಡಿದವು ಬಗುರೆಯೊಲೇ
ನಗೆಯು ಸೊಡೆಯು ಕೆಳಗೆ ಮೊರೆವ ಬಯಕೆಯು ಕಡಲು
ತೆರೆತೆರೆ ತೆರನಾಗಿ ತೆರೆಯುತಿರೇ
ಸನೆಕೊನೆ ಕಾತಿತು ಅತ್ತೆಯ ಸೊಸೆ-ಮುದ್ದು
ಚೊಚ್ಚಿಲಬಸಿರಿ ನೀ ಎದೆ ತೆರೆದೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

ಬಡವರ ಸಿಂಗಾರ ಬಯಕೆಗೆ ಮೂಲವು
ನವಮಾಸ ಆಲಸಿಕೆಯಲಿ ಕಳೆದೇ
ಹುಡುಗನ ಜೋಗುಳ ಮುಗಿಲ ಮುಟ್ಟುವದಿತ್ತು
ಮಿಂಚಿತು ಕಾರ್ಯವು ನೀನುಳಿದೇ
ಏಕಾಕಿ ಸಿಡಿಲಾದೆ ತಾಯಿಯು ಕಂಗೆಟ್ಟು
ಅವಳ ಕನಸಿನ ಕಳಸ ಹೊಡೆಮುರಳಿತೇ
ನೂಕಿದೆ ಕಾಲವ ಮಾಗಿಯ ಮಂಜಿಗೆ
ಮಂಜರಿ ಬಾಡಿದ ಮಾಪಿನೊಲೇ.

ಮೊದಲಿನ ಫಲವೊಂದು ಮೊಸಲು ಮಣ್ಣಿಗೆ
ಎಂಜಲುಗೊಳುತಿತ್ತೊ ಮುದ್ದಿಸಿರೆ
ತುದಿಕಳಿಸಿ ಬಂದಿದ್ದ ಕಣ್ಣೀರ ತಳಿಯಿಂದ
ಕಣ್ಣೆಂಜಲು ಮಾಡಿ ಮಸಣನೊಳೆ
ಮರುಳಿದೆ ಮನೆಯತ್ತ ಮರುಳಂತೆ ನೆರಳಂತೆ
ಕರುಳೆಲ್ಲ ಕಡಲೊಲು ಕುದಿಯುತಿರೆ
ಚಿರಗಾಡೆ ಬೆಪ್ಪಾದೆ ನಿಮ್ಮಿಬ್ಬರ ಅಳಲು
ಮೌನ ಮೊಟೆದ ಹಾಗೆ ನರಳುತಿರೆ.

ಅಸಿವಸಿಯಲಿ ಕುಸಿದ ತಾಯಾಸೆ ಕತ್ತೆತ್ತಿ
ಕಣ್ಣೆತ್ತಿ ಮತ್ತೊಮ್ಮೆ ಕುದುರದಿರೆ
ಬಿಸಿಗೆ ಬೆಚ್ಚಿದ ಎದೆಯು ಪುರುಚಲ ಬಸಿರಿಯ
ಬಯಕೆಗೆ ತಗುಬಗೆಯಾಗುತಿರೆ
ಕನಸಿಗು ಹೊಳೆಯದ ಬರಸಿಡಿಲೆರಗಿತು
ತಾಯಿ-ಗಿಡವು ಮಾಯವಾಯಿತೆಲೇ
ನನಗೂ ನಿನಗೂ ಅಂಟಿದ ನಂಟನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ನೆಲೆ ತಪ್ಪಿದ ಹಕ್ಕಿ ಅಲೆವಂತೆ ಮುಗಿಲಲಿ
ಹತ್ತು ದಿಕ್ಕಿಗೆ ನಾನು ಹಾರಾಡಿದೆ
ಒಲವಿಗೆ ಹುಡುಕಾಡಿ ಬಾಳಿಗೆ ಎಡುಕಾಡಿ
ಷಡ್ರಸ ನವರಸ ರುಚಿ ನೋಡಿದೆ.
ಕೂಸಿನ ಹೊಸ ತಾಯಿ ನಸು ಮಾಯೆ ಬೀಸುತ
ನೀನು ನನ್ನೊಡನಿಂತು ಒಲೆ ಹೂಡಿದೆ
ಮೊಸಲು ಮುರಿಯದ ಒಲವಿಗೆ ಬಾಯ್ಬಿಡದೆ
ಕಣ್ಣೊಡ್ಡಿ ಹುದುವಿನ ಸವಿ ಬೇಡಿದೆ.

ಸಿಟ್ಟೆಷ್ಟೊ ಸೆಡವೆಷ್ಟೊ ತಿಳಿದೆಷ್ಟೊ ತಿಳಿಯದೆ
ತಪ್ಪು ಆಗುವದೆಷ್ಟೊ ದಿನಬಳಕೆಗೆ
ಬಿಟ್ಟೂಬಿಡದೆ ಬೇಟ ಸಾಗುತಿತ್ತು
ಬೇಟೆ ಆಡಿದ ಹಾಗೆ ದಣಿದಣಿದೆವೆ
ಹುಸಿನಗುವ ಕೂಸಿನ ಹೊಸ ಹೊಸ ಆಟಕೆ
ಮನಸೋತು ಮುನಿಸನ್ನು ಅರೆಮರೆತೆವೆ
'ಬೆಸೆದಿದ್ದ ಜೀವದ ಬೆರಕೆಯಾಗಲುಬೇಕು
ಪಡೆದ ಜೀವವ ಕಂಡು' ಎಂದರಿತೆವೆ.

ಬಾಳಿನ ಬೆಂಕಿಗೆ ಮೈ ಬೆಂದು ಮನ ನೊಂದು
ಬಲುಮೆಯ ಒಲುಮೆಯ ಕುಲುಮೆಯಲೇ
ತಾಳಿಕೆ ಬರುವಂಥ ಉಕ್ಕಾಗಿ ಬರುತಿರೆ
ಮುಕ್ಕಾದ ಮೊನೆಯೀಗ ಮಸೆಯುತಿದೆ
ಮಿಸುಗುವ ಮಿಂಚಾಗಿ ಮುಂಚಿನ ಕೈಧಾರೆ
ಕಣ್ಣೀರಲಾಗಾಗ ತೊಳೆಯುತಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಛಟ್ಟೀ ಮುಂದಿನ ಬಿಟ್ಟಿ ಮೋಡವು ಒಂದೊಂದು
ಗಳಿಗೆಯ ನೆರಳಾಟ ಹೂಡುವೊಲೆ
ಬಿಟ್ಟಿಗೆ ಬಂದನು ಹೊಸದೊಬ್ಬ ಕಂದನು
ಅತಿಥಿಯೋ ಎಂಬಂತೆ ತೆರಳಿದನೇ
ಈಗಿತ್ತು ಈಗಿಲ್ಲ ಎಂಬೀ ಬಾಳೋ ಹಾಳೊ
ಗತಿಯೆತ್ತೊ ಗುರಿಯೇನೊ ಎನ್ನುತ್ತಲೇ
ಹಾಗಿದ್ದ ಬಾಳುವೆ ಹೇಗಾರೆ ಸಾಗಿಸಿ
ಎಡಹುತ್ತ ತಡವುತ್ತ ನಡೆದಿದ್ದೆವೆ.

ಇದ್ದಷ್ಟು ದಿಸವಾರೆ ಇರುವಷ್ಟು ಪ್ರೀತಿಯು
ಇನ್ನಷ್ಟು ರುಚಿ ನೋಡಿ ಹೋಗುವದೇ
'ಬಿದ್ದಕಾಲಕೆ ಹಾದಿ ಹಿಡಿದದ್ದೆ ಸಡುಬೀದಿ'
ಎನ್ನುವರಂತೆಯೆ ಸಾಗಿದ್ದೆವೇ
ಮಗುವಿನ ನಗುವೊಂದು ನಮಗಿದ್ದ ನೆಚ್ಚೊಂದು
ಬಾಳಿನ ಹುಚ್ಚೊಂದು ಮೆಚ್ಚೆಂದೆವೇ
ಹಗಲಷ್ಟು ಹುಡುಗಾಟ ಇರುಳಿಗೆ ಬೆಡಗಾಟ
ಕಹಿಯಾಗದಿದ್ದದ್ದೇ ಹೆಚ್ಚೆಂದೆವೇ.

ನಿನ್ನೆಡೆ ಕರೆಯುವೀ ನೀ ನನ್ನ ಮತ್ತೆನ್ನ
ಕನ್ನಡ ಕರೆವುದು ತನ್ನೆಡೆಗೆ
ಚಿನ್ನಾಟ ನನಗಿದು ನಿನಗದು ಅಗಲಿಕೆ
ಮೌನದರಣ್ಯಕೆ ನೀ ಬೆದರಿದೇ
ನನಗಿತ್ತು ಹಳೆಮಾತು ಸವಿಸುಡಿ ನಿನಗೇನು
ನಾನೊಂದು ಮಗುವೊಂದು ರಂಜನೆಗೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ

ಹೊಸದೊಂದು ಹಸಿವಿಗೆ ಬಗೆ ಬಾಯಿದೆರೆದಿತ್ತು
ತಿಳಿಯದೆ ನಿನ್ನೊಳಗಸ್ವರೊಳೆ
ಹಸುಮಗು ಹಾಲಿನ ರುಚಿ ಸಾಕು ಎನುವಂತೆ
ಸಪ್ಪನೆಯ ಬದುಕಿಗೆ ನೀ ಹೇಸಿದೆ
ಗೊಂಬೆಯಾಟದೊಳಿದ್ದ ತನ್ಮಯ ಮಾಯೆಯು
ನಿಜ ಬಾಳಿನೆಲ್ಲೆಲ್ಲು ಕಾಣದಲೆ
ರಂಬಿಸಕೊಳಲೆಂದು ಚಿಕ್ಕಂದು ಕೇಳಿದ್ದ
ಕಥೆ ಹಾಡುಗಳನ್ನೆಲ್ಲ ನೆನೆನೆನೆಸಿದೆ.

'ಹಿಂಗೊಬ್ಬ ಅರಸಿದ್ದ' ಎನ್ನುತ್ತ ಎಂದೆಂದು
ಕಾಲಿಲ್ಲದ ಕಥೆ ಸಾಗುತಿರೆ
ಹ್ಯಾಂಗಾರೆ ಕಥೆ ಮುಗಿದು ಕಾಡಿಗೆ ಹೋಗಲು
ಬೆರಗಿಲೆ ಮೊಗವಗಲಾಗುತಿರೆ
ಮಾಜಲಿ ಮೊಗ ಮೊದಲು ಎಡರೆಷ್ಟೇ ಬರುತಿರಲಿ
ಮುಗಿತಾಯ ಸಿಹಿಸಕ್ಕರೆಯಾಗುತಿರೆ
ರಾಜಪುತ್ರಿಗೆ ಕೊನೆಗೆ ಕಟ್ಟಿಟ್ಟ ಹಾಗೆಯೆ
ರಾಜಪುತ್ರನು ಬರುವ ಹೇ ಸುಖವೇ!

ಅಟ್ಟಂಬಟ್ಟಾರಣ್ಯದೊಳು ರಾಕ್ಷಸನು ಬಂದು
ಹೊಸನಾತ ಎನ್ನುತ್ತ ತಿನ್ನಲಿರೆ
ಸತ್ತರೇಸತ್ತರೇನಲ್ಲಿಗೈತರುವರು
ಶಿವಪಾರ್ವತಿ ಅವರನೆಬ್ಬಿಸಲೇ
ಗೊನೆಗೊಂದು ಸವಿಹಣ್ಣು ಬಿಟ್ಟರೆ ಒಟ್ಟಿಗೆ
ಬದುಕಿನ ಮರವೆಲ್ಲ ಚೆಲುವಲ್ಲವೇ?
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

'ನವಿಲೇ ನವಿಲೇ ಮಳೆ ಬಂದಾಗೆಲ್ಲಿದ್ದೆ ?'
'ತಿರುಮಲೆರಾಯನ ತೋಪಿನೊಳೇ !'
ಕವಿದಿರೆ ಕತ್ತಲು ಮನವೊಂದು ಇತ್ತಲು
ಕೇಕೆ ಹಾಕಲುಬೇಕು ಕೇಳಿಯೊಳೆ
'ಮಾಗಿಯ ಕಾಲಕ್ಕೆ ಹೇಗಿದ್ದೆ ಕೋಗಿಲೆ?'
'ಹೋಗಿದ್ದೆ ಬನವಾಸಿ ಪನವಿನೊಳೆ'
ಸೊಗಕೊಂದು ತಾವುಂಟು, ಋತುಬದಲಾದರೇ-
ನೆಮಗೆಮ್ಮ ಬಿತ್ತರದ ಭೂಮಿಯೊಳೇ.

'ತಾಯಿಕಾಣದ ಜೀವ ತಾವೂರಿ ಬಾವೂರಿ'
ಎಂದೆನಲು ಕಂಬನಿ ಒಡೆಯುತಿರೆ
ಹಾಯಾಗಿ ಹಾಡಿದೆವು 'ಆಡಿ ಬಾ ಎನ ಕಂದ'
ಬೇರೊಂದು ತಂತಿಯು ಮಿಡಿಯುತಿರೆ
ಹುಡುಗನ ಒಡ ನಾವು ಹುಡುಗಾಟವಾಡಿದೆವು
ಹುಡುಗತನವು ಮರಳಿ ಬಂದಿತೆನೆ
ಒಡಕು ಕಣ್ಮರೆಗಾಗಿ, ಮಿಡುಕು ಮರೆತಂತಾಗಿ
ಹುಡುಕಿದೆವು ಇನ್ನೊಂದು ಲೋಕವನೆ.

'ಗುಜುಗುಜು ಮಾಪುರೆ' ಎನುತಿತ್ತು ಎದೆಯಲ್ಲಿ
ಗುಜುಗುಜು ಕಿವಿಮಾತು ಆಡಿದೊಲೆ
ಗಜಗ ತೂರಿದ ಹಾಗೆ ತಿರುತಿರುಗಿ ಹಾರಿದವು
ಹಳೆ ನೆನವು ಮತ್ತೊಮ್ಮೆ ಹಾಡಿದೊಲೆ
ಮನದಾಡುಂಬೊಲದಲ್ಲಿ ಮೈಮರೆತು ಕೂಡಿದೆವು
ಚಿತ್ರಗಳಾದೆವು ಚಿತ್ತದೊಳೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

ಯುವಸಯಾಮಿನಿ-ಕಥಾ-ಕೌತುಕದ ಕಡಲಲ್ಲಿ
ಕೌತೂಹಲಿಯಾಗಿ ನೀ ಧುಮುಕಿದೆ
ಕವನ-ಕಾಮಿನಿಯರ ಕಳ್ಳರ ಕ್ಷುಡುಕರ
ಒಳ್ಳೆಯುವರ ಜೀವನವ ಕದುಕಿದೆ
ಆ ವೀರಶೃಂಗಾರ, ಸಸ್ಮಿತ ವಿಸ್ಮಯ,
ರುದ್ರಭಯಾನಕವನು ನೋಡಿದೆ
ನಾನೀಗ ಉಣುತಿರುವ ಕರುಣದ ಹಾಸ್ಯದ
ಪರಿಯನೆ ಅಲ್ಲಿಯೂ ನೀನೋದಿದೆ.

ಬಗೆ-ಬಾನ ತುದಿಯಿಂದ ನಡುನಡುವೆ ಮುಗಿಲೊಂದು
ಕಿಡಿಗೇಡಿಯೊಲು ಏಕೋ ಗುಡುಗುತಿರೆ
ನಗೆಯಾಟ ಹೊಗೆಯೇರಿ ನುಡಿಯಲ್ಲಿ ಕಿಡಿ ಹಾರಿ
ನಮ್ಮೆದೆ ತಾನಾಗಿ ನಡುಗುತಿರೆ
ಹಳವಂಡ ಕನಸನ್ನು ಕಂಡವನು ನೆನೆನೆನೆಸಿ
ಯಾಕೇನೊ ತಬ್ಬಿಬ್ಬಲಾಗುವೊಲೆ
ಎದೆ ಹೊಕ್ಕು ಕಂಡರೂ ತಳ ಕಾಣದಾಗಲು
ಕಂಗೆಟ್ಟು ಮನ ತಣ್ಣಗಾಗುತಿರೆ.

ಬಸಿರೆಂಬ ಕುತ್ತೊಂದು ತುತ್ತಲಿರುವ ಹಾಗೆ
ಆಗ ಕಂಡಿತು ನಿನ್ನ ಮುಖದ ಕಳೆ
ಗ್ರಹಣದ ಮುಂಛಾಯೆ ಬಿದ್ದ ಬಿಂಬದ ರೀತಿ
ವೇಧವು ಹಿಡಿದಿತ್ತು ತಾ ತನ್ನೊಳೆ
ಜನುಮಕು ಮರಣಕು ಒಳಸೂತ್ರ ಇರುವದ
ಕಂಡಾಗ ಇತಿಮಿಯಾಯ್ತೆನಗೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಸುಗ್ಗಿಯು ಬರುವಾಗ ತರುವುದು ಸಂಗಡ
ಮಾಂದಳಿರ ಮಲ್ಲಿಗೆ ಮೊಗ್ಗುಗಳ
ಅವು ತರುವವು ಗುಂಗಿ ಗುಂಜಾರವವನು
ಕೋಗಿಲೆಯ ಪಂಚಮದಿಂಚರವ
ಹೊಂಗೆಯು ಹೂವಿನ ರಂಗವಲ್ಲಿಯ ಬಿಡಿಸಿ
ನೆರಳನು ನೀಡುತ ನಿಲ್ಲುವುದು
ಮುತ್ತುಗ, ಬೂರಲ, ದೀಪಮಾಲೆಯ ಕಂಬ
ಗಗನದ ಬಯಲೊಳಗೆತ್ತುವುದು.

ಸುಖ ತಾನು ಬರುವಾಗ ಗುಳೆ ಎತ್ತಿ ಬರುವುದು
ಒಂದಲ್ಲ ಎರಡಲ್ಲ, ಪರಿವಾರವೆ:
ಕಂದನ ಕಿರಿಕಿರಿ ಕಿಲಿಕಿಲಿ ನಗುವಾಗಿ
ಹೊಸಮನೆ ಗಮಗಮ ಎನ್ನುತಿರೆ
‘ಜಯಕರ್ನಾಟಕ’ವೆನ್ನುತ ಗೆಳೆಯರ
ಕನ್ನಡದಾಸೆಯು ಗುಡಿಕಟ್ಟಿತು
ಮುಂದಿನ ಏನೇನೊ ಕನಸಿನ ಕಳಶ ಗೋ-
ಪುರಗಳ ಕಲ್ಪನೆ ಮೇಲಿಟ್ಟಿತು.

ಜೀವದಾಸೆಗಳೆಲ್ಲ ಹೊಸೆದು ಹುರಿಗೊಳ್ಳುತ
ನಮ್ಮ ಮನೋರಥವೆಳೆಯುತಿರೆ
ಗರುಡನ ಹಕ್ಕಿಯು ಗರಿಗೆದರಿ ಹಾರಿತು
ಬಾನಾಗ ಕರೆದಿತು ಬರಿ ಹಾಲನೆ
ಗಾಳಿಯು ಊದಿತು ಹೊಡೆಯು ಹೆಡೆದೂಗಿತು
ದಿಕ್ಕೆಲ್ಲ ನಮ್ಮನೆ ನೋಡುತಿವೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ

ಮಲೆನಾಡ ಸೆರಗಿನ ನೆರೆಗಿದ್ದ ಮನೆಯೊಂದು
ಮಮತೆಯ ಕುರುಹಾಗಿ ತಾ ದೊರಕಿತು
ಅಲ್ಲಿ ಸಂಪಿಗೆಯಿತ್ತು ಪಾರಿಜಾತಕವಿತ್ತು
ಮಾವು ಮಲ್ಲಿಗೆಯಿತ್ತು ಮನೆಯಿದಿರು
ಮುಗಿಲ-ಮಲ್ಲಿಗೆಯಿತ್ತು ತೆಂಗಿತ್ತು ಹಲಸಿತ್ತು
ನಿಂಬಿಯು ಇಂಬಿತ್ತು ಎಡೆಎಡೆಗೆ
ಹೊಂಗೆಯು ಸಾಲಿತ್ತು ಕಣ್ಮುಂದೆ ಕೆರೆಯಿತ್ತು
ಗುಡ್ಡದ ನೆರೆಯಿತ್ತು ಅದರಾಚೆಗೆ.

ವೃಕ್ಷವಾಟಿಕೆಗಳಲಿ ಬಳಬಳಸಿ ಹೋಗುವ
ಹಾದಿಬೀದಿಗಳುಂಟು ನಾಲ್ಕೆಡೆಗು
ತೋಪು ತೋಟಗಳುಂಟು ಜೋಳದ ಹೊಲವುಂಟು
ಭತ್ತದ ಗದ್ದೆಯು ಬದಿಬದಿಗು
ಬನದೇವಿಯೆಡೆಯಾಟಕೆಡೆಗೊಡುವ ಗುಡ್ಡದ
ಸಾಲಿನ ತೋಳುಂಟು ಪಡುವಲೊಳು
ಶಬರಿ ಪಾಮರಿಯರ ಸುಳಿದಾಟ ನಲಿದಾಟ
ಸುಗ್ಗಿಸುಗ್ಗಿಗು ಉಂಟು ಅದರದರೊಳು.

ಋತುಗಳ ಏರಿಳಿತ ಕಾಳ ರಿಂಗಣಗುಣಿತ
ಬಿಡಿಬಿಡಿಸಿ ಬರೆದಂತೆ ಚಿತ್ರದೊಳು
ಬಡವರ ಅಲೆದಾಟ, ಹೊಟ್ಟೆಯ ಬೆಂಬತ್ತಿ
ಗುಳಿಯೆತ್ತಿ ಹೊರಟವರ ಹೋರಾಟವು
ದುಡಿವರ ತಿರುಕರ ಕೂಲಿ ಕುಂಬಳಿಯವರ
ಜೀವನ ಮೂಡಿರೆ ಹಾದಿಯೊಳೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಅಲ್ಲಿರುತಿರುಲಾಗಿ ಸಹಜವಾಗಿಯೆ ನನ್ನ
ದೃಷ್ಟಿಯು ನಟ್ಟಿತು ಸೃಷ್ಟಿಯೊಳು
ಮಳೆಯಾಕೆ ಚಳಿಯಾಕೆ ಭೂಮಿಯ ಬೆಳೆಯಾಕೆ
ಬಿಸಿಲಾಕೆ ನಸ್ನಾಕೆ ನೆರೆಯಾದರು
ಇರುಳವಳು ಹಗಲವಳು ಬೆಳಕು-ನೆಳಲಿನವಳು
ಬೆಳದಿಂಗಳವಳು ನಮ್ಮವಳಾದಳು
ಗಿಡಮರದ ತೂಗಾಟ ಹಸುಹಕ್ಕಿ ಕೂಗಾಟ
ಚಿನ್ನಾಟ ನನ್ನಾಟ ಒಂದಾದವು.

ಗಾಳಿಯ ಹಾರಾಟ ಏರಾಟ ಚೀರಾಟ
ಭೋರಾಟ ಕುಣಿದಾಟ ತುಳಿದಾಟವು
ಎಳೆದಾಟ ತೂರಾಟ ಎಲೆಗಳ ಕಳೆವಾಟ
ಸುಟ್ಟುರೆಯ ಗಾಳಿಯ ಹುಡಿಯಾಟವು
ಛಂದೋಗತಿಯ ಚೆಂದ, ತಾಳ-ಲಯದಾನಂದ
ಸ್ವಚ್ಛಂದ ಬಂಧವ ಕಲಿಸಿದವು
ನಾಡ ಬಳಕೆಯ ನುಡಿಗೆ ಸೋತಿದ್ದ ಮನವನ್ನು
ಹಾಡಿನ ಮೋಡಿಗೆ ಒಲಿಸಿದವು.

ಹಾವುಗಳರಮನೆ ಹೂವಿನ ತವರ್ಮನೆ
ನಮ್ಮನೆ ನೆರೆಹೊರೆಯವರೆನ್ನಲು
ನರಿನಾಯಿ ಇದಿರಾಗಿ ವಾದಿಸಿ ಬೆಚ್ಚಿಸಿ
ಎಚ್ಚರಿಸಿ ನಿದ್ರೆಗೆ ನೆರವಾದವು
ಕುರಿಯಾಡು ದನಕರು ಓಡಾಡಿ ಕೂಡಾಡಿ
ನಾಡಾಡಿಗಳು ನಾವು ಜೋಡಾದೆವೇ !
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

ಎಳ್ಳ ಅಮಾಸಿಗೆ ಎಳ್ಳಷ್ಟು, ಅವರೆಯ
ಕಾಳಷ್ಟು ಬೆಳೆದಿತ್ತು ಅವರಾತ್ರಿಗೆ
ಬಿಸಿಲಲ್ಲ, ಬೇಯಿಸುವ ಬೆಂಕಿಯು! ಬೇಗೆಯು
ಶಿವಶಿವ ಎನಿಸಿತ್ತು ಶಿವರಾತ್ರಿಗೆ
ಕಾಮನ ಸುಟ್ಟಿತ್ತು ಬಾನೆದೆ ನೆಟ್ಟಿತ್ತು
ಸುರಿಬೆವರು ಹುಟ್ಟಿತ್ತು ಜನದೆದೆಗೆ
ಪಾನಕವೆಂದಿತು ಪ್ರಾಣ ನಿತ್ರಾಣಿಸಿ
ಸ್ನಾನಕೆ ಹಸಿದಿತ್ತು ಮೈ ಧಗೆಗೆ.

ಬೇಸಿಗೆಯುಟ್ಟಲು ಬೀಸಣಿಗೆ ಬೀಸಾಡಿ
ಮರುಳಾಟದಲಿ ಜನ ತೊಳಲುತಿರೆ
ಜೋಲ್ದವೆ ಇಳಿಸುತ ಅರನಿದ್ದೆ ಮರೆಯಲ್ಲಿ
ಹಗಲುಗನಸಿಗೆ ಜೀವ ಬಳಲುತಿರೆ
ಮಣ್ಣೆದೆಯಲಿ ಝುರಿಸುವ ನೀರ ಸೆಲೆಯಂತೆ
ಮಾಂಸದಿ ತೊರೆಯುವ ಹಾಲಿನೊಲು
ಬಿಸಿಲೆದೆಯನು ಬಿರಿದು ಬಯಸಿದ ಸುಳಿಗಾಳಿ
ಬಳಬಳ ಮೈಬಳಸಿ ಸುತ್ತಾಡಿತು.

ಬೇವೇನು ಮಾವೇನು ನರುಗಂಪ ನೆರಳಿಗೆ
ನಿದ್ರಾಂಗನೆ ಮನವೆಳೆಯುವಳು
ಚಂದನ ಗಂಧವ ಬೇಡಿತ್ತು ಕೊರಳೆದೆ
ನಂದನ ನೆನೆಸಿತ್ತು ಉಸಿರಾಟವು.
ಬಾಳದ ತಂಪಿನ ಕಪ್ಪುರಗಂಪಿನ
ನೀರೆ ಜೀವನವೀಗವೆನಿಸುತಿದೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಪೋಳಿಹುಣ್ಣಿವೆ ಬಿಸಿಲು ಕಾಮನ ಸುಡಲೆಂದು
ತೆರೆದಿದ್ದ ಉರಿಗಣ್ಣ ತೆರೆದಲಿರೆ
ಬೇಳುವೆಯೊಳಗಿಂದ ಬೆಳಕೆದ್ದು ಬಂದಂತೆ
ಬಾಳುವೆಯು ಸುಳಿಯೊಂದು ಸೀಳಿಬರೆ
ಸತಿಯರ ಹೃದಯಸ್ಥ ಸುಪ್ತರತಿಯು ತಾನು
ತಿಳಿದೆದ್ದ ಸಂಗನಾಲಿಂಗಿಸಿರೆ
ಮತಿ-ಮಥನದಿಂದಾದ ಮನ್ಮಥನನಿರುದ್ಧ
ಉಷೆಯು ಕನಸಿನ ಕೂಡ ಕೂಡುತಿರೆ.

ಮಾವೆಲ್ಲ ಕಾತಿತ್ತು ಮಲ್ಲಿಗೆ ಹೂತಿತ್ತು
ಕೋಗಿಲೆ ಕೂತಿತ್ತು ಕಾಣದೊಲೆ
ಕಾವಿನ ಕಾಹುರಕೆ ಸುಗ್ಗಿಯ ಸೇವುರವೊ
ಮೈ ಜುಮ್ಮು ರುಮಜುಮು ಎನ್ನುತಿರೆ
ದಿಕ್ಕುದಿಕ್ಕಿಗೆ ಸುಗ್ಗಿ ಪಂಚಮದಿಂಚರ
ಮುತ್ತಿಟ್ಟು ಮರುಮರುಳಿ ಬರುತಲಿರೆ
ಮಲಮಲ ಎನ್ನುವ ಮಲ್ಲಿಗೆಯುಂದದಿ
ಚಿಗುರು-ಪ್ರಾಯದ ಮನ ಮಲರುತಿದೆ.

ಚೈತ್ರ ವೈಶಾಖಗಳು ಜೈತ್ರಯಾತ್ರೆಗೆ ಹೊರಟು
ಪ್ರಾಯದ ಕೈಸೆರೆಗೊಳುತಲಿರೆ
ಮೈತ್ರಿಯ ಬೀಜವು ಮದುವೆ ಮುಹೂರ್ತಕೆ
ಆಗಾಗ ಕಲ್ಲೊಳು ಬೀಳುತಿದೆ
ಹೋಮ-ಧೂಮಗಳಲ್ಲಿ ಉರುಳಿದ ಕಂಬನಿ
ಗಲ್ಲದಲ್ಲಿಯೆ ಆರಿಹೋಗುತಿವೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಆಷಾಢದ ಮುಗಿಲು ಬೀಸಾಡಿ ಬಂದವು
ಈಸಾಡಿ ಬಂದಂಥ ಆನೆಗಳೇ
ರೋಷದ ತೋಷದ ಬೆಡಗು ಬಿನ್ನಾಣವ
ಬೀರುವ ಬಿಂಕದಿ ಮೆರೆಯುವೊಲೇ
ಎಚ್ಚತ್ತ ಕಾಮಗೆ ಪಚ್ಚೆಯ ಪಸದನ
ಕಾಣಿಕೆಗೊಡುವಂತೆ ನೆಲವೆಲ್ಲವೆ
ಹಚ್ಚ ಹಸಿರಾಯಿತ್ತೊ ಹುಚ್ಚು ಹಸಿರಾಯಿತ್ತೊ
ಹುಚ್ಚು ಹಿಡಿಸಿತು ನೋಡೆ ಲೋಚನಕೆ.

ಬಂದಿತು ಶ್ರಾವಣ ಹೃದಯ ವಿದ್ರಾವಣ
ಕಾನನ ಕಾವಣವಾಗುತಿರೆ
ಪಡುಗಾಳಿ ಹಾಡಿತು ಗಿಡಬಳ್ಳಿ ಆಡಿತು
ಹೊಲ-ಹುಲ್ಲು ನೋಡಿತು ಲೀಲೆಯೊಳೆ
ನಿರ್ವಕ್ಕಿ, ಬಾನಕ್ಕಿ, ಬೆಳ್ಳಕ್ಕಿ ಹಾಲಾಗಿ
ಸಾಲಾಗಿ ಮೇಲಾಗಿ ಹಾರುತಿರೆ
ಮಿಸ್ಗಳು, ಮಿಂಬುಲಿಗ, ಮಿಂಚುಹುಳ ಮಿಂಚಿನ
ಬಳಗವೊ ಎಂಬಂತೆ ತೊಳತೊಳಗಿರೆ.

ಮೋಡದ ದುರ್ದಿನಕೆ ಮಾರ್ದನಿ ಬರಲಿಲ್ಲ
ಎದೆಯೆಲ್ಲ ಘನನೀಲ ವ್ಯಾಪಿಸಿರೆ
ಗುಡುಗಿಗೆ ನಡುಗದೆ ಅಡಗಿದ ದುಂದುಭಿ-
ರವವೊಂದು ಒಳಗಿವಿ ಕೇಳುತಿರೆ
ಗಕ್ಕನೆ ನಿಲ್ಲಲು, ಹೌಹಾರಿ, ಹಗಲಲ್ಲೆ
ಇರುಳಾಗೆ, ಧ್ವನಿಯೊಂದು ಏಳುತಿದೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ವರ್ಷಾಕಾಲದ ಭಾಷೆಗೆ ಭಾಷ್ಯಕೆ
ಬರೆದ ವಾರ್ತಿಕದಂತೆ ಕಾರ್ತಿಕವು
ತಿರುಳೆತ್ತಿ ಹುರುಳೆತ್ತಿ ತೆನೆತೆನೆ ತೋರುವದು
ಬೆಂಡಿಗು ಸವಿಯಿತ್ತು ನೆಲಹೊಲವು
ಬರ್ಚಿಗಾರರ ಬಲವೆ ಬೀಡಾರ ಬಿಟ್ಟಂತೆ
ಒಟ್ಟಿಲಡಲಿ ಜೋಳದ ನೆಲುವು
ಆಳೆತ್ತರವಾಗಿ ನಿಂತಿದೆ ಕಾಳಾಗಿ
ಬಯಲಿಗೆ ತಾನರಸನೆನ್ನುವೊಲು.

ಕೃತ್ತಿಕೆಯ ಮಣಿಹಾರ ಕೊರಳಿಂದ ಬಿಡಿಸಲು
ಬಿಳಿಮುಗಿಲ ಬೆಡಗನ್ನೆ ಇರುಳುಟ್ಟಿತ್ತು
ಮೃಗಶಿರದ ಮಂಚಕೆ ಚಂದಿರ ಬರುವಾಗ
ಚಂದ್ರಿಕೆಯ ವಾತ್ಸಲ್ಯ ತೊರೆಬಿಟ್ಟಿತ್ತು
ಲೋಕದ ಅನ್ನವು ಲೋಕದಂತೆಯೆ ತಾನು
ಹಂಪುಗಾಲದ ಬೆಳೆಯು ಹಾಲುಂಡಿತ್ತು
ಬಾಂದಳದ ಬೆಳ್ಳಿಗೆ ಭೂಮಿಯು ಬಂಗಾರ
ಸಿಂಗಾರ ಮೊಗವೆತ್ತಿ ಮುದ್ದಿಟ್ಟಿತ್ತು.

ಶಾರದ-ಶುಭ್ರಾಭ್ರ-ಶಾರದೆ ರಸದುಂಬಿ
ನಡೆಸಿದ ನವಿಲಿನ ನರ್ತನವೊ
ಕಾರ್ತಿಕಸ್ವಾಮಿಯು ತಾರಕನ ಗೆದ್ದಾಗ
ತಾರಗೆ ಹಚ್ಚಿದ ಕಾರ್ತಿಕವೋ
ಎಂಬಂತೆ ನೆಲಮುಗಿಲು ಕಾಲವಿದ್ದರು ಕೂಡ
ನಂಜು-ಗಾಳಿಗೆ ಬೆದರಿ ಜನರಿಹರೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಹೊಸ್ತಿಲ ಹುಣ್ಣಿವೆಗೆ ಹೊಸ್ತಿಲ ನಡುಗಿತ್ತು
ಬನದ ಹುಣ್ಣಿವೆಗೆಲ್ಲ ಬನ ನಡುಗಿದೆ
ಮನೆ ನಡುಗಿ ಮನ ನಡುಗಿ 'ಏ ಹುಡುಗ, ಎಲೆ ಹುಡುಗಿ'
ಎನ್ನುವ ಸಲುಗೆಯು ಬೆಸುಗೆ ಬರೆ
ಮೈ ತಾಗಿ ಮನ ಬಾಗಿ, ಒಳಿತಾಗಿ, ಇಂಬಾಗಿ,
ನಾವಾಗಿ, ಈ ಮಾಗಿಗೊಳಗಾಗಿರೆ
ಕೊಡುಕೊಳೆ ಎಂಬುದು ಇಮ್ಮುಖದಲಿ ಕೂಡ
ಒಮ್ಮುಖವೆಂಬಂತೆ ಆಗುತಿದೆ.

ಕಂಕ ವಿಶೃಂಖಲ ಬಿಂಕದ ಬೆನ್ನೇರಿ
ಬಾನೆಲ್ಲ ತಾನೊಂದೆ ಆಳುವೊಲೆ
ತೇಲುತಲೇರುತ ತೇರುತ ಸಾಗಿರೆ
ಏಕಾಕಿ ಸಾಕಾಗಿ ನೆನಪಾಗಿರೆ
ಕಿಂಖೀಲಿ ಲಿಲಿಲೀಲಿ ಉಲಿದುಲಿದು ನಲಿನಲಿದು
ಕೆಳದಿಯು ಕೆಳೆ ಬಯಸಿ ಕರೆಯುತಿದೆ
ಆಕಾಶಪುಷ್ಪವು ಅರಳಿತ್ತು ಹೊರಳಿತ್ತು
ತೆರಳಿದ ದಿಟ್ಟಿಯು ಒಂದುಕಡೆ.

ಕಾಲ್ಬಿದ್ದು ಕೈಹಿಡಿದು ಮುತ್ತಿಟ್ಟು ಮುಗಿಬಿದ್ದು
ಮೈಏರಿ ಮೈಹೊಕ್ಕು ಮಾಗಿ ಬರೆ
ಮೈಮೈಯುಡರುವ ಮಾಗಿಯ ಮೈಮೆಯು
ಬೆಳಗು ಮುಸುಕಿನಲ್ಲು ಒಗ್ಗುತಿರೆ
ಮಕರಸಂಕ್ರಾಂತಿಗೆ ಮೈತುಂಬ ತುಟಿತುಂಬ
ಎದೆತುಂಬ ಕುಸುರೆಳ್ಳು ಮೂಡುತಿದೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಕಾಮನ ಹುಣ್ಣಿವೆ ಹಣ್ಣಾಗಿ ಹರಿವಂತೆ
ತೊರೆಯಾಗಿ ನೆರೆಯಾಗಿ ಹೊನಲಾಗಿರೆ
ಸೀಮೆಗೆ ಸೀಮೆಯೆ ಹುಚ್ಚು ಬೆಳುದಿಂಗಳದ
ಹಸದನದಲಿ ಅಚ್ಚ ಹಸನಾಗಿದೆ
ಹಲಚಿಕ್ಕೆ ಚಂದ್ರಿಕಾ-ಜಲದಲ್ಲಿ ಮುಳುಗಿವೆ
ಕೆಲಚಿಕ್ಕೆ ಹಾಯಾಗಿ ತೇಲುತಿವೆ
ಮಲಗಿದ್ದ ಕಣ್ಣೆಲ್ಲ ಒಮ್ಮೆಲೆ ಎಚ್ಚತ್ತು
ಕಣ್ಣಾರೆ ಕುಡಿದರು ತೀರದಿದೆ.

'ಬಡವ ಬಲ್ಲಿದನೆಂಬ ಭೇದವದಿಲ್ಲದೆ
ಹಾದಿ-ಬೀದಿಗು ಸಂದಿಗೊಂದಿಯೊಳೆ
ಹಿಡಿಸದೆ ತುಂಬಿದೆ ತಗ್ಗಿಲ್ಲ ತೆವರಿಲ್ಲ
ಮಿಣುಕು-ತಾರೆಗಳಲ್ಲಿ ತುಳುಕುತಿಹೆ
ಮೊದ್ದು ಮಾನವರೆಲ್ಲ ನಿದ್ದೆಯೊಳಿದ್ದಾಗ
ಸದ್ದಿಲ್ಲದೆ ಕದ್ದು ಮುದ್ದಿಡುವೆ
ಮುಗ್ಧ ಮಾತೆಯು ಹಾಗೆ, ಎದೆಹಾಲ ಎರೆಯುವೆ
ಚಂದ್ರಲೋಕದ ತಾಯಿ ಬೆಳುದಿಂಗಳೇ !'

ಭರತ ಇಳಿತದಲ್ಲಿ ತೊಟ್ಟಿಲಾಡಿಸುತಿರೆ
ಚಂದ್ರಿಕೆ ತಿಂಗಳು ತಿಂಗಳಕೆ
ಇರುಳ ಹಡಗಿನಲ್ಲಿ ಮರುಳು ಜೀವಗಳೆರಡು
ಧ್ರುವನಲ್ಲಿ ಕಣ್ಣಿಟ್ಟು ಸಾಗುತಿವೆ
ಅನುವಿರಲಿ ತಣಿವಿಗೆ ಎಂದೆಂದು ಕೌಮುದಿ
ಕಿಲುಬೇರದಿರಲೆಂದೆ ಕನವರಿಕೆ.
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಋತುಗತಿಯ ತತಿಯಲ್ಲಿ ಹದಬೆದೆ ಕಂಡುಂಡು
ಹವಣಾಗಿ ನಡೆದಿತ್ತು ಬಾಳುವೆಯು
ಕಾಲಮಾನದ ಹಾಗೆ ತಾಲಮಾನವ ಪ-
ಲ್ಲಟಿಸುತ್ತ ಹೆಜ್ಜೆಯ ಹಾಕುವೊಲು
ಪಾದ ಪದ್ಧತಿಯಲ್ಲಿ ಪದ ಕೂಡಿ ಬರುವಾಗ
ಯಾರಾರೆ ಗುರು-ಲಘು ಎಣಿಸುವರೆ?
ಯಾ ರಾಗವೆಂದರು ಯಾರಾಗ ಕೇಳುವರು
ಅನುರಾಗವನುರಣಿಸಿ ತಣಿಸುತಿರೆ?

ಶಿವನ ಕುದುರೆಯನೇರಿ ಶ್ರಾವಣದ ಹಸರಾಣಿ
ಹೂಗಣ್ಣು ತೆರೆದಾಡಿ ಕುಣಿಯುವೊಲು
ನನ್ನ ಚಿತ್ರಕ-ಶಕ್ತಿ ಉತ್ಪ್ರೇಕ್ಷೆಯನೇರಿ
ಬಣ್ಣಬಣ್ಣದ ಬಣ್ಣನೆಗೆ ಒಲೆದಿತು
ಯಾವುದಕೆ ಯಾವುದು ಸರಿದೊರೆಯೆನ್ನುತ
ತನ್ನ ಗೆರೆಬಣ್ಣಗಳನ್ನೊರೆ ಹಚ್ಚಿತು
ಮನದಲ್ಲೆ ಮೂಲೋಕ ರಚಿಸುವ ಊಹೆಯು
ತನ್ನ ಚಿಂತನದಲ್ಲೆ ತಾ ಮುಳುಗಿತು.

ಕೊಟ್ಟದ್ದೆ ರೂಪವು ಇಟ್ಟದ್ದೆ ನಾಮವು
ಕಟ್ಟಿದ್ದೆ ಹುರುಳೆಂಬ ಮದದೊಳಿರೆ
ಬ್ರಹ್ಮಪಟ್ಟವನೇರಿ ರೂಪಕ-ಶಕ್ತಿಯು
ಸೃಷ್ಟಿಯನಳೆದಿತು ದೃಷ್ಟಿಯೊಳೆ
ಕಾದು ಕೆಂಪಾಗಿತ್ತು ದುಃಖದ ಕೆನೆ ಕೂಡ
ಮನೆಮಠ ಮಸ-ಮೈಗಳರೆಮರೆತಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಹೆಣ್ಣು ಗಂಡಿಗೆ ಚೆಲುವು, ಗಂಡು ಹೆಣ್ಣಿಗೆ ಬಲವು
ಇದುವೆ ಹೆಣಿಗೆಯ ಬಲವು ಮೂಲೋಕಕು
ಎಂಬೆನೇ ನಂಬೆಸು ? ಕೂಗೀತು ಕೋಗಿಲ
ಕೇಕೆ ಹಾಕುತ ಕೇಕಿ ಕುಣಿದಾಡಿತು
ಗಂಡುಗಾಡಿಗೆ ಮರುಳು, ಹೆಣ್ಣಿನ ಹೆಂಗರುಳು
ನಿಜ ಧೀರರ ನಿಲುವೇ ಚೆಲುವು
ಗಾರುಡಿಗರ ಮೋಡಿ ನಾಗಮೋಡಿಯ ಜೋಡಿ
ಹೆಣ್ಣಿನ ಮೋಡಿಯು ಒಲೆದೊಲವು.

ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
ಕಣ್ಣಿಗು ಕಣ್ಣಾಗಿ ಒಳಗಿಹುದು
ರೂಪ-ಲಾವಣ್ಯಕ ಅಳೆಯಲುಬಾರದು
ಅವುಗಳೆ ಇದರೊಂದು ಕಣವಿಹವು
ಇದಿರಿಗೆ ಚೆಲುವಾಗಿ ಇದುವೆ ತಾನೆನುವಾಗ
ಒಲವಾಗಿ ಒಳಗಿಂದ ಹೊಮ್ಮುತಿದೆ
ಅಲ್ಲಿತ್ತು ಸ್ವಾನಂದ, ಇಲ್ಲಿದೆ ರಸರಂಗ
ಎಲ್ಲೇನು ಒಂದೆಂದೆ ಚಿಮ್ಮುತಿದೆ.

ಎಲ್ಲಿಂದೊ ಬಂದೊಂದು ಸೌಂದರ್ಯ-ಝರಿಯಿಂದ
ಎದೆ ಎದೆಗು ಕಾರಂಜಿ ಪುಟಿಯುತಿದೆ
ಯಾರಿಂದೊ ಚಲಿಸುವ ಪ್ರಾಣದ ಸೂತ್ರವು
ಪುರುಷ-ಪ್ರಕೃತಿಗಳನು ಕುಣಿಸುತಿದೆ
ಘನರಸ ಆನಂದ; ಆನಂದದ್ರುವ ರಸ
ಯಾವದೊ ಕಾವಿಗೆ ಆಗುತಿದೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

‘ಕುಣಿಯೋಣು ಬಾ’ ಎಂದು ಪ್ರಣಯದೋಲೆಯನೊಂದು
　　ಎದೆವಾತಿನಿಂದೆದೆಗೆ ನಾನಟ್ಟಿದ್ದೆ
ಪ್ರತಿಭೆಯ ಗರ್ಭದ ವಿಶ್ವಕರ್ಮನ ಕರೆಸಿ
　　ಗಾಳಿಗೋಪುರವೊಂದು ನಾ ಕಟ್ಟಿದ್ದೆ
ವಾಗಿಂದ್ರ-ಜಾಲದ ಮಾಲೆಮಾಲೆಯ ಬೀಸಿ
　　ಸಪ್ತ-ಸ್ವರ್ಗದ ಶಿಖರವನು ಮುಟ್ಟಿದ್ದೆ
ನನ್ನ ಪಾಲಿಗೆ ಮಾತ್ರ ಹೇ ಪ್ರೇಮದೇವತೆ!
　　ಮೌನಮುದ್ರೆಯನಲ್ಲು ನೀ ತೊಟ್ಟಿದ್ದೆ.

ಅಪರಂಪಾರದ ಪಾರವಾರವು ಕೂಡ
　　ಎದೆಯ ತೆರೆತೆರೆ ತೆರೆದು ಹಾರುವುದು
ಎಷ್ಟಾಳವಿದ್ದರು ಗಂಭೀರ ಕಾಸಾರ
　　ಸೂರ್ಯಕಿರಣಕೆ ತಳ ತೋರುವುದು
ಕೋಟಿ ಕ್ರೋಶಗಳಾಚೆಯಿಂದ ಗಗನೋದರದಿ
　　ಚಿಕ್ಕೆ ಹಾಸ್ಯದ ಕಿರಣ ಬೀರುವುದು
ದುರ್ಭೇದ್ಯವೆನಿಸುವ ಮೌನ-ದುರ್ಗಕೆ ಮಾರ್ಗ
　　ತೋರದು ಎಂತಾರೆ ಸೇರುವುದು.

ಮಾತಿಗು ಮೌನಕ್ಕು ಯಾತರ ಒಗೆತನ?
　　ನೀರಿಗು ಕಲ್ಲಿಗು ಏನು ಜತಿ?
ಬಯಲಲ್ಲಿ ಭೋರಾಡಿ ಬವಣಿಗೊಳ್ಳುವ ಗಾಳಿ
　　ಭಣಗುಟ್ಟಿ ಬರುವದು ತಿರುಕಿರುಗಿ
ಒಳಗಿದ್ದ ಪ್ರಕೃತಿಗೆ ಒಳದನಿಯೊಂದಾಗ
　　ಅಂತರ್ಮುಖವಾಗಿ ಕರೆಯುವುದೇ
ನನಗೂ ನಿನಗೂ ಅಂಟಿದ ನಂಟಿನ
　　ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಮೌನದಲ್ಲಿಯು ಕೂಡ ಮಾತಿನ ಧ್ವನಿಯಿರಲಿ
ಮೂಕ-ಮೌನವು ಒಂದು ಶಾಪದೊಲು
ತಾಪವ ಕೊಡುವುದು, ತಾ ಪರಿಹರಿಸದು
ಜೀವ ಯಾತನೆಯನ್ನು ಅದು ಎಂದಿಗು
ಮಾತಿನಲ್ಲಿರುವಂಥ ಮೌನದ ಧ್ವನಿಯಿಂದ
ವಿಷ್ವಲತೆ ಬೆಳೆಯುವದಿಬ್ಬರಲಿ
ಇಬ್ಬರ ಮನವಾಗ ಇಬ್ಬಗೆಯಾಗುವುದು
ಒಬ್ಬಗೂ ಸುಖವಿಲ್ಲ ಬದುಕಿನಲಿ.

ಪ್ರಣಯದ ವಾಣಿಯು ವೀಣಾ-ಪ್ರವೀಣನು
ನುಡಿಸುವ ಮಿಡಿಸುವ ತಂತಿಯೊಲು
ಮನದೆಲ್ಲ ಮಾತನ್ನು ಮೌನದಿ ನೆನೆವಂತೆ
ಎಳೆಯೆಣಿಸಿ ಗುಂಗುಣಿಸಿ ಬಿಡಿಸುವುದು
ಚಿಗುರಿಸಿ ಹೂವಿಸಿ ಕಾಯಿಸಿ ಪಣ್ಣಿಸಿ
ಬಣ್ಣಿಸುವೊಲು ಜೀವ-ವಲ್ಲಕಿಯಾ
ಬಲ್ಲವ ಬಲ್ಲನು ಏಕತಾನದ ನಾದ
ಜೀವನದುನ್ಮಾದ ಅನುಭವಿಯಾ.

ನನ್ನ ಚಿತ್ತದೊಳಿರುವ ಚಿತ್ರಗಾರನು ಬರೆದ
ಚಿತ್ರಕೆ ಬಹದೆಂದೊ ಜೀವಕಳೆ?
ಅದು ಬಂದ ದಿನದಿಂದ ಮಾತು ಮೌನಗಳಲ್ಲಿ
ಹಾಸಾದ ಹೊಕ್ಕಾದ ಉಸಿರಿನೆಳೆ
ವಾಣಿಯ ವೀಣೆಯ ತನನನದ ತಾನವು
ಆ ವರೆಗು ತಂತನದ ಮನನವಿದೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

‘ ಅಕ್ಕೆಕ್ಕಿ ಭೋರಂಗಿ ಆಡಿಸಲು ಬೇಕೆಷ್ಟು ?
ಸೂಲಿನ ಎಳೆಯೊಂದು ಸಾಕಿಲ್ಲವೇ ?
ಕಣ್ಣನರಳಿಸೆ ಒಂದು ಕಿರಣವು ಸಾಕಿದೆ
ಜೀವಾಳ-ನುಡಿ ಜೀವನವ ಸಾಕಿದೆ
ಮುಖದ ಮುದ್ದಿಗೆಷ್ಟು ಮಂದಸ್ಮಿತ ಸಾಕು
ಸಾಕು ಗಾಳಿಯು ಸುಳಿಯು ಬೆಂದವಗೆ
ಇಲ್ಲದಿರೀ ಬಾಳು ಸಾಕು ಸಾಕೆನಿಸೀತು—
ಸಾಕು ಈ ಹಕ್ಕಿ; ಬಿಡು ಬೇಕಾದರೆ.

ಮಾಟವಿಲ್ಲದ ಆಟ, ಏನಾಟ? ಎಳೆದಾಟ !
ಮಾಯಾ-ಸಂಸಾರಕ್ಕೆ ಮಾಯೆ ಬೇಕು
ಮಾಯಾಬ್ರಹ್ಮಗಳಂತೆ ಮುಖ ಬಯಲು, ಕಣ್ಬಯಲು
ಎದೆಬಯಲು, ಮೊದಲೆ ಉಸಿರು ಬಯಲು.
ಬರಿ ಅಂತರಿಕ್ಷದಿ ಪಕ್ಷಿ ಹಾರೀತೆಷ್ಟು ?
ಬೇಕು ತಂಗಲು ಮುಂಗೈಯಾಸರೆಯು.
ಪಂಚೇಂದ್ರಿಯ ಸೃಷ್ಟಿ ಬೇಡುವ ಕವಿ ಒಂದು
ಗವಿ ಹೊಕ್ಕಂತಾಯಿತೇ ಸಹವಾಸವು ? ’

ಪುಟುಗುಟ್ಟುತ್ತಿರಲೆದೆ ತುಟಿ ಕಚ್ಚಿ ಹಿಡಿದಿದ್ದೆ
ನನ್ನಲ್ಲೆ ನಾನಿಲ್ಲ ಎಂಬಂತಿರೆ
ಹೊಸ ಪಟ್ಟಣವ ಹೊಕ್ಕು ಹಾದಿ ತಪ್ಪಿಸಿಕೊಂಡ
ಎಬಡ ಹಳ್ಳಿಗನಂತೆ ನಿನಗಾಗಿರೆ
ಸಡುಗಿತ್ತು ಧರ್ಮವು, ಅಡಗಿತ್ತು ಇಷ್ಟವು
ಕಷ್ಟವೆ ಬಾಳೊಳು ಕರುವಿಟ್ಟಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

ಮೋಹನದಾಸನ ಉಸಿರಿಗೆ ಬೀಸಿದ
ಬಿರುಗಾಳಿಯಾಗ ಸುಟ್ಟುರೆ ತಂದವು
ಒಣ-ಎಲೆ ಹುಡಿ-ಮಣ್ಣು ಸೊಪ್ಪು-ಸವದಿಗಳೆಲ್ಲ
ಮೋಡಗಳಾಡುವ ಎಡೆ ಕಂಡವು
ಹುಡುಗರು ಹುಚ್ಚಾಗಿ ತರುಣರು ಮೆಚ್ಚಾಗಿ
ಮುದುವರು ಸೆಚ್ಚಾಗಿ ನೋಡಿದರು
ಹಲಕೆಲವರು ತಾವೆ ಪುಕ್ಕ-ಹಕ್ಕಿಗಳಂತೆ
ದಿಕ್ಕುಪಾಲಾಗುತ ಓಡಿದರು.

ಆಳುವರ ಸಂಶಯ-ಜಾಲವು ನಾಡಿಗೆ
ಕಂಡಂತೆ ಸಿಕ್ಕಲ್ಲಿ ಬಲೆಬೀಸಿತು
ಯಾರಾರೊ ಎಂತೇನೊ ಸೆರೆಸಿಕ್ಕುಬಿದ್ದರು
ಪುಣ್ಯವ ಪಡೆದವರೊಲು ಗೆದ್ದರು
‘ನರಬಲಿ’ ಕವನವು ಬಲಿಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು
ಮನೆಯನು ಮುರಿದಿತು ಹಾರು ವಿಹಂಗಮ !
ಜಂಗಮ-ದೀಕ್ಷೆಯು ನಿನಗೆಂದಿತು.

ಪ್ರಾಣದ ಒಗರಷ್ಟು ಹಿಂಡಿತು ಹಿಂಡಲಿಗೆ
ಮುಗದದ ಮಲೆಗಾಳಿ ಮುಂದೆಳೆದಿತು
ಆಳುವರ ಮೇಲೊಬ್ಬ ಆಳುವನಿರದಿರೆ
ಹಾಳಾಗಿ ಹೋಗಿತ್ತು ಈ ಜಗವು
ದಿಕ್ಕಿಲ್ಲದವರಿಗೆ ದಿಕ್ಕಾಗಿ ನಿಂತವನ
ಧ್ರುವನೊಡೆಯನ ನಿಲ್ಲು-ನೆಲೆ ಮಿಂಚಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

‘ ಹರಿವ ನೀರಿನ ಮೇಲೆ ಹರಗೋಲ-ಮನೆ ಕಟ್ಟಿ
ಗೊತ್ತಿಲ್ಲವೆ ನಲ್ಲೆ ಹೊರಟಿಹೆವು ?
ನೆಲವೆಂದು ಸ್ಥಿರವೆಂದು ಅಸ್ತಿವಾರವ ಹಾಕಿ
ನಾಡಾಡಿ ಜನ, ಮನೆ ಕಟ್ಟಿಹುದು
ಪರಿಣಾಮಕ್ಕೆಡೆಗೊಟ್ಟು ಪರಣತಿಗೊಳ್ಳುವ
ಸೃಷ್ಟಿಗೆ ಸರಿ ನಮ್ಮ ಬಾಳುವೆಯು
ಕುದಿ ಎಸರು ಬರದಿರೆ, ಚಳಿ ಬಿಸಿಲು ಉಣದಿರೆ
ಪರಿಪಾಕವೆಂಬುದು ಎಂತಹುದು ? ’

‘ ಅವರವರ ಕೆಚ್ಚಿಗೆ ಸರಿಯುವರ ನೆಚ್ಚಿಕೆ
ನಿಮ್ಮಂತೆ ನನಗಿಲ್ಲ ಆ ತ್ರಾಣವು
ತೊಟ್ಟಿಲ-ಜೀಕವ ತೂಗ ಕೈಬಿಟ್ಟರೆ
ಗಾಳಿಯು ರಾಟಾಲದೊಳು ಪ್ರಾಣವು
ತಿರುತಿರುಗಿ ಬಂದರು ತೆಳಗೆ ಮೇಲೆಂದರು
ಮುಂದಿಲ್ಲ ಹಿಂದಿಲ್ಲ ಹಾಗೇ ಇದೆ
ಈ ಬಾಳ-ಬವಣಿಗೆ ಹವಣಿಲ್ಲ ಹತಿಯಿಲ್ಲ
ಕಂಗಳು ಏಕೋ ಕತ್ತಲಿಸುತಿವೆ.’

ಜೋಡಿ ಇಲ್ಲದ ಎತ್ತು ಎಳೆದಾಡುವ ಗಾಡಿ
ನಡೆದಂತೆ ತತ್ತರಿಸಿ ಒಗೆತನವು
ಹಗೆಯಾಗದಿರಲೆಂದೆ ಇಬ್ಬರೂ ಹವಣಿಸಿ
ಒಬ್ಬರನೊಬ್ಬರ ತೂಗಿದೆವು
ತ್ರಾಸು-ತಕ್ಕಡಿ-ಮುಳ್ಳು ಏಕಾಗ್ರವಿರುವಂತೆ
ಧಾರಣೆಯಲಿ ಕೆಲದಿನ ಕಳೆದೆವೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

ಬೆಳಕಿನ ಕೆಚ್ಚನು ಕತ್ತಲೆಯ ಕಿಚ್ಚನು
ಮುಗಡದ ಗವಿಯಲ್ಲಿ ನೆರೆ ಕಂಡೆವು
ಹುಚ್ಚಾಗಿ ನಕ್ಕೆವು ನಚ್ಚಿಗೆ ಸಿಕ್ಕೆವು
ನೆಚ್ಚಿಗೆಯಾತರದಿದೆ? ಎಂದೆವು
ಕೋಪದ ತಾಪದ ಪಾಪದ ಶಾಪದ
ಶ್ವಾಪದಗಳಿಗಂಜಿ ಒಳಹೊತೆವು
ಸೂತೆವು ಯಾವಾವ ಆಸೆಯ, ನೇಯದ
ನೂಲಿಗೆ ಜೋತೆವು ಮನಸೋತೆವು.

ಮಾರನೆ ಬೆಳಗಿಗೆ ಕೃತಯುಗ ಬಂತೇನೊ
ಎಂತೇನೋ ಎನುವಂತೆ ಕುಣಿದಾಡುತ
ಹಾಡನು ಕಟ್ಟಲು ಏಕನಾದವ ಹಿಡಿಯೆ
ಪ್ರಳಯಮೇಘದ ದಾಳಿ ಮೇಲೇರುತ
ಝುಂಝಾಮಾರುತ ಸಾರುತ ಹಾರುತ
ನೆಲಸಮಮಾಡಿತು ತೋಟವನು
ಕಿಡಿಗೇಡಿ ದೈವವು ನಮ್ಮೊಡನಾಡಿತು
ಯಾಕೇನೊ ಸಖಿ, ಹುಡುಗಾಟವನು.

ಗಾಣಿಗಗೆ ಸಿಟ್ಟಾಗಿ ಒಣರೊಟ್ಟಿ ತಿಂದಂತೆ
ಅಸಮಾಧಾನಕೆ, ರಸವಿಂಗಿಸಿ
ಹಾದಿಯ ದೆವ್ವವ ಮನೆಯೊಳಗೆ ಕರೆದಂತೆ
ಒಬ್ಬರನೊಬ್ಬರು ಮುಖ ಭಂಗಿಸಿ
ಕೆಣಕಾಡಿ ಅಣಕಕೆ ಕಾದಾಡಿ ತೇದಾಡಿ
ತನುಮನ ಮನೆಗಳ ಕುಂದಿಸಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಉರಿವೋರೆ ಬಿರಿಗಣ್ಣ ಮನೆಯ ಹೊತ್ತಿಸುತಿರಲು
ಕಾಡ-ಬೇಗೆಗೆ ಸಿಕ್ಕ ಮರಿಗಳೊಲು
ಪಕ್ಕಗಳು ಬಲೆತಿಲ್ಲ, ಹಾರಿಕೆ ಕಲಿತಿಲ್ಲ
ಮುಗಿಲನ್ನೆ ಮೊರೆಹೊಕ್ಕು ನೋಡುವವು
ಪಿಳಪಿಳನೆ ಕಣ್ಬಿಟ್ಟು ಕಂಡವು ಮಕ್ಕಳು
ಬಿದರು-ಗಣ್ಣುಗಳಿಂದ ಬೆಸಗೊಂಡವು
ಏನಿದು ? ಏಕಿದು ? ಸಾಕಿದು! ಎದೆಗರಗಿ
ಕಣ್ಬನಿ ಉರುಳಿಸಿದವು, ನೊಂದವು.

ಮುಗ್ಧತೆ ಎಂಬುದು ದುಗ್ಧಸಾಗರವಹುದು
ಲೋಕಪಾಲನಶಕ್ತಿಯದರೊಳಿದೆ
ಮಕ್ಕಳ ಮುಖದಲ್ಲಿ ಹೆಕ್ಕಳಿಸಿ ಹರಿಯುವ
ಜೀವಕಳೆ ಮುಪ್ಪು ಜಕ್ಕುಲಿಸುತಿದೆ
ಈ ಮನದ ಮುಪ್ಪಿಗೆ ಇರುವಿಕೆಯ ತಪ್ಪಿಗೆ
ಮದ್ದೆಂದು ಅವುಗಳ ಮುದ್ದುಂಡೆವು
ಕತ್ತಲೆಯ ಮನೆಯಿಂದ ಬೆಳಕಂಡಿಯೊಳಗಿಂದ
ಗಗನದ ನೀಲಿಮೆಯನು ಕಂಡೆವು.

ದೇವನ ಕರುಣೆಯ ಕರುಳಿನ ತಿರುಳೊಂದು
ಚಿಚ್ಚಿಗುರುತಿರುವಂತೆ ಪ್ರತಿದಿನವು
ಮಕ್ಕಳ ನೆರೆಯೊಂದು ತೆರೆತೆರೆಯಾಗುತ
ಕ್ಷಣಕ್ಷಣಕು ಬರುತಿದೆ ಲೋಕದೊಳು
ಕೂಸುಗಳು ಸೂಸುವ ಮೀಸಲ-ನಗೆಯಲ್ಲಿ
ಮಿಂದರು ಮಾಸಲು ಮನವುಳಿದಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಸಂಸಾರಯಾತ್ರೆಯು ಸಾಗರದೊಡನಾಟ
ಲವಣೋದಧಿಯಲ್ಲಿ ಜಲ-ಪಯಣ
ಎಲ್ಲಿಗೈತಂದರು ಬರದೊಂದು 'ಬಂದರು'
ಪೃಥ್ವಿಪ್ರದಕ್ಷಿಣೆಯೆ ನಿತ್ಯಕ್ರಮ
ಉರಿಗಾಳಿ ಬಿರುಮಳೆಗಳಿಗೆಲ್ಲ ಎದೆಗೊಟ್ಟು
ತಿಮಿತಿಮಿಂಗಲಗಳನೆದುರಿಸಿಯೂ
ಒಬ್ಬರನೊಬ್ಬರು ಕೊಂದು, ತಂತಮ್ಮವರ ತಿಂದು
ಕೊನೆಗೇನು ಹಡಗೊಡೆಯೆ ಜಲಮುಕ್ತಿಯು.

ಇರುಳೆಲ್ಲ ಸುಧೆ ಕುಡಿದು ಬೆಳ್ಳಿಬಟ್ಟಲು ಬೊಕ್ಕು-
ಬರಲಿಕ್ಕಿದೊಲು ಚಂದ್ರ ಪಡುವಲೊಳು
ಬಿದ್ದಾಗ ನಾನೆದ್ದೆ ನೆನಸಿದ್ದು ಕನಸಾಗಿ
ಹೋಗುತಿರುವುದ ಕಂಡು ಅರಮರುಳು
ಆವರಿಸಿ ಡಾವರಿಸಿ ಜೀವವು ಹೇವರಿಸಿ
ಆದದ್ದ ಸ್ಮರಿಸ್ಮರಿಸಿ ಎನ್ನುತಿದೆ:
'ಜೀವನವೆ ಹೊಗೆಯಾಗಿ ಉಗಿಯಾಗಿಬ್ಬನಿಯಾಗಿ
ಮಂಜಾಗಿ ಮುಸುಕಾಗಿ ಹೋಗುತಿದೆ.'

ಗಾಳಿಗೆ ಗಾಳಿಯು, ಬಯಲಿಗೆ ಬಯಲು ಎಂ-
ದೆನ್ನುವ ಸುಡುಗಾಡಸಿದ್ಧರೊಲು
ಗುಡಿ ಹೋಯ್ತು ಹುಡಿಗೂಡಿ ಗಾಳಿಗೋಪುರ ಗಾಳಿ-
ಗೂಡಿತು ಮಾಟದ ಆಟದೊಲು;
ಮೂರ್ತಿಯು ಇಂಗಿತ್ತು ಮೈತ್ರಿಯು ಹಿಂಗಿತ್ತು
ಮನ ಕನಸ ನುಂಗಿತ್ತು ಬಂದಿರುಳೊಳೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಕೊನೆಗೊಮ್ಮೆ ಬರುವಂಥ ಕಾಳರಾತ್ರಿಯು ಬಂದು
ಹಗಲಿಗೆ ಇರುಳನು ಹೊದೆಯಿಸಿತು
ತಳ-ಪಾಯ ಅದುರಿತು, ಕೆಲಸವು ಕೆದರಿತು
ಗೆಳೆತನ ಮುದುರಿತು, ಮನ ಬೆದರಿತು
ಹನ್ನೆರಡು ವರುಷದ ತಪ ವಿಫಲವಾಯಿತೋ!
ಮಾಯೆಯ ಮಯಸಭೆ ಕಟ್ಟಿದ್ದೆವೋ!
ದೈವದ ನಿಕಷಕೆ ಪೌರುಷವಿಳಿಯದೆ
ನಿಂತಂಥ ನೆಲವೆಲ್ಲ ನೀರಾಯಿತೋ!

ಮಿಡಿತೆಯ ಉಪಟಳ ಹೊಲದುದ್ದ ಬರುವಂತೆ
ಬಂದಿತು ದುಃಖವು ದಂಡಿನೊಲು
ತೆನೆಗಳ ಚೆಂಡಾಡಿ, ಕಾಳುಗಳ ಚೆಲ್ಲಾಡಿ
ಕಣವನೆ ರಣ ಮಾಡಿ ನಗೆಯಾಡಿತು
ಸಾವು ಸಂಕಟಗಳು ನೋವು ನವೆದಾಟವು
ಒಟ್ಟಾಗಿ ನಿಂತವು ಬವಣೆಗಳು
ಸತ್ತ್ವಪರೀಕ್ಷೆಯ ಯಾವ ಅಧ್ಯಾಯವು
ಪ್ರಾರಂಭವಾಯಿತೊ ಇಂದೆಂದೆನು.

ಕೆಲವೊಬ್ಬ ಗೆಳೆಯರ ವಿಶ್ವಾಸ, ಒಬ್ಬಿಬ್ಬ
ಗೆಳೆಯರ ನೆರೆಯೊಲವು ಕಾಯದಿರೆ
ಆಗೀಗ ಸಖಿ ನೀನು ನಸುನಕ್ಕು ದುಃಖದಿ
ದುಃಖವ ಹಗುರಾಗಿ ಮಾಡದಿರೆ
ಕಾಯುವ ಕರುಳೊಂದು ಬೆಂಗಾವಲಿರದೆಯೆ
ದೇಶಾಂತರದಲ್ಲಿ ಬದುಕಿದೆನೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಪುಣೆಯಲ್ಲಿ ಕಳೆದಂಥ ಅಜ್ಞಾತವಾಸವ
ನೆನೆದರೆ ಮೈಯೆಲ್ಲ ಜುಮ್ಮೆನ್ನುತ
ಮುಗದದ ದಿನಗಳ ಮರೆಯಿಸಿ ಬಿಡುವವು
ನಿನ್ನ ನಿರಾಶೆಯು ಕೊನೆಮುಟ್ಟುತ .
ಜೀವದ ಬೇಸರ ನೆಲೆಯೂರಿ ನಿಂತಿತು
ನೀನೆನ್ನ ಕೈಬಿಟ್ಟೆ ಎಂದೆನಿಸಿತು
ಮಾಯಾಸಿದ್ಧಾಂತವು ನಿನ್ನಲ್ಲಿ ಜೀರ್ಜಿಟ್ಟು
ಕೂಡಿದ್ದು ಬಿಟ್ಟದ್ದು ಒಂದೆನಿಸಿತು.

'ಲಲಿತಾ' ಎಂದರೆ ನಾಲಿಗೆ ಈಗಲು
ರಸ ಒಸರುತ ಹಿಗ್ಗ ಬೀರುವದು
ಆ ಕೂಸ ಕಳಕೊಂಡು, ನೀನೆಂತೊ ಉಳಕೊಂಡು
ಲಾಲಿತ್ಯವಿಲ್ಲದ ಶೈಲಿಯೊಲು
'ಹೋ!' ಎಂದೆ, ಎದೆನೊಂದೆ ಬಚ್ಚ ಬರಿಗೈಯಿಂದೆ
ತೆರವೋ ತೆರವೆಂದೆ ಹಗಲಿರುಳು
ನನ್ನ ಜೀವನದಲ್ಲಿ ಹೆಸರಲ್ಲೆ ನಿಂತಂಥ
ಸಂತಾನ ಒಂದಿದೆ ಎದೆ-ಮುಳುವು.

ಬಯಲ ಮಾಳಿಗೆಯಲ್ಲಿ ಬೆಳುದಿಂಗಳೊಳು ಕೂಡ
ಖಗ್ರಾಸದ ದಿನದ ಕತ್ತಲೆಯು
ನುಂಗಿರೆ ಸಂವಾದದ ಹೊಳೆವಾದದ
ಉಪ್ಪು-ನೀರಿಗೆ ಬಂದು ಹಿಂಗುತಿರೆ
ಜೀವದ ಪಣ ಸೋತು, ಅಗ್ನಿದಿವ್ಯದ ಮಾತು
ನಾ ನೀನು ಆಡಿದ್ದು ನೆನಪಿದೆಯೇ?
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಅಡ್ಡ ಜಂತಿಯು ಕೆಳಗೆ ಅಡ್ಡಾದವರಂತೆ
ಎದೆಭಾರ ಕನಸಲ್ಲು ನಿನಗೆನಿಸಿತ್ತು
ಸುಸ್ವಪ್ನ-ರಾಕ್ಷಸಿ ದುರುಳತನದಿ ನಿನ್ನ
ಚಂಡಿ ಮಾಡುವರಂತೆ ಛಲ ತೊಟ್ಟಿತ್ತು
ನೋಡನೋಡುತ ಮುಗಿಲ ರೂಪನೆ ಮುರಿವಂತೆ
ನಿನ್ನ ಕನಸಿನ ಕಟ್ಟಡವೆ ಕಳಚಿತು
ಇದ್ದಕಿದ್ದೊಲು ನಿನಗೆ ಮೈಭಾರ, ಮನ ಶೂನ್ಯ
ಮಾತೆಲ್ಲ ಸೋತವರ ಉಸಿರಾಯಿತು.

ಹೆಣದ ತಂಗೈ ನನ್ನ ಮುಂಗೈಯ್ಯ ಹಿಡಿದಂತೆ
ನಿನ್ನ ಮಾತಿನ ಪಟ್ಟು ಮನಕೆನಿಸಿತು
ಎಳೆದೆನು, ಕೊಸರಿದೆ ಜಗ್ಗಾಡಿ ನುಗ್ಗಾಡಿ
ತಪ್ಪಿಸಿಕೊಳಲು ಜೀವವು ನರಳಿತು
ಪ್ರೇತದ ತಕ್ಕೆಯಲಿ ಸಿಕ್ಕ ಪ್ರೀತಿಗು ಹಾಗೆ
ಬಿಡಿಸಿಕೊಳ್ಳುವ ರೀತಿ ಬಗೆಹರಿಯದು
ಕೆಂಡದ ಮೈ-ಬೂದಿ ಅದನಲ್ಲೆ ಹುಗಿವಂತೆ
ಉತ್ಸಾಹ ಉಸಿರೊಳೆ ನನಗಡಗಿತು.

ಮುಗಿಯದೆನಿಸಿದ ಹಾಡು ಒಮ್ಮೆಗಿಲೆ ಮುಗಿತಾಯ
ಬಂದರೆ ಗಕ್ಕನೆ ತಡವರಿಸದೆ
ನಿಡಿದಾದ ದಾರಿಗೆ ಕಡುಬಂಡೆ ಕಂಡರೆ
ಬಂಡಿ ಒಂಡಿಯಲಲ್ಲೆ ಮುಗ್ಗರಿಸದೆ
ಆ ಕಣ್ಣು ಎಂದಾರೆ ಈ ಕಣ್ಣ ತಾಗಿದರೆ
ಗೊಂಬಿ ಮೂಡದ ಕುರುಡುಗಾಜಾಗಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

‘ ಸಾಕ್ಷಿಯಾಗುತ ಪುರುಷ ಈಕ್ಷಿಸಬಹುದೆಮ್ಮ
ಅಕ್ಷಿನಿಮೀಲನದೆದೆ ಮರುಳು
ಪ್ರಿಯಳ ಸಮಾಗಮ ನಿಮಗೊಂದು ನೋಟವು
ನಮಗದು ಸಮರಸ ಸಂಗಮವು
ನಿಮಗೇನು ರಮ್ಯತೆ ರಸಿಕಗೆ ಕರೆಯುವ
ನೂರು ಹಾದಿಯುಳೊಂದು ಅದು ಹಾದಿಯು
ನಮಗೆ ಜೀವನದಾಟ-ಪಾಟದ ನೋಟದ
ಬೇಟದ ಕೂಟದ ಸುಸಮಾಧಿಯು.’

‘ ಜೀವನ ರಣರಂಗ ನಮಗದೆ ನವರಂಗ
ಅಲ್ಲಿ ಸಾವಿನ ಸಂಗ ದಿನದಿನವು
ಆ ಶ್ರುತಿಗೆ ಜೀವಡೆನ ಪ್ರಾಣ-ಪ್ರಗಾಥಕೆ
ಆ ಮಹಾತಾಳ ಭಾವದ ಲಯವು
ನಮ್ಮ ಅಮೃತೇಶ್ವರನ ಗುಡಿ ಅಲ್ಲಿ, ನಮ್ಮಯ
ಪ್ರೇಮತರಂಗಿಣಿ ಮುಳುಗುವದು
ಭಂಗಿಗೆ ಭಣಿತಕ್ಕೆ, ಮಾತಿಗೆ ಮೌನಕ್ಕೆ
ಜನುಮಕ್ಕೆ ಮರಣಕ್ಕೆ, ಅದೆ ಎಡೆಯು.’

‘ ನಿಮ್ಮ ಮಾತಿನ ರೀತಿ ಗಹನ ಗೀತಿಯ ಹಾಗೆ
ಅದರಿದಿರು ಈ ಪ್ರೀತಿ ಹುಸಿಗಾಳಿಯು
ನಿಮ್ಮ ಜೀವನ ರೀತಿ ಬೇಸಿಗೆಯ ಬಿರುಗಾಳಿ
ಅದರ ಸೆರಗಿಗೆ ನಾನು ಬರಿ ಗಾಳಿಯು’
‘ ಅಹಹಾ! ಜೀವದ ಗೆಳತಿ, ಜೀವನದ ಜೊತೆಗಾರ್ತಿ
ನೀನಿಲ್ಲದಾನಿಲಲು ನೆಲವಿದೆಯೇ?
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

‘ ಜೇಡದ ಬಲೆಯಾಗಿ ತೋರುತಿಹುದೀ ಪ್ರೇಮ
ಗಾಳಿಯು ಸೂಲೆತ್ತಿದದರೆಳೆಯು
ಪ್ರೇಮ-ಪ್ರಸಾರದ ಸ್ನೇಹದ ಸಾರದ
ಅಂಟಸಂಟಿಸುವದು, ಸುಡಿನೋಟವು
ಯಾರಿಗೂ ತೋರದ ಏತಕೂ ಬಾರದ
ಈ ಜಾಲ ಜಗದಗಲ ಬೀಸಿಹುದು
ಮರುಳಾದ ನೊಣವನ್ನು ನೊಣೆಯೆ ಸಂಭ್ರಮವೆಷ್ಟು!
ಏಕಿಹುದೊ ನೂರಾರು ಕೈ ತೆರೆದು ! ’

ಹೀಗೆಂದು ಹಿಂಜರಿದು ನಿನ್ನೊಳಗೆ ಹುಗಿದಾಡಿ
ಕರುಳನೆ ಬಗೆದಾಡಿ ಕಂಗೆಡದೆ
ಕಣ್ಬಿಟ್ಟು ಕರುಣೆಯಲಿ ಅರುಣ-ದೃಷ್ಟಿಯ ತೆರೆದು
ನೋಡು ನಸುಕು ಹರಿಯುವದೀಗಳೇ
ಭೀತಿಯ ಹುಟ್ಟಿಸುವ ಪ್ರೀತಿಯು ಪ್ರೀತಿಯೆ?
ಪ್ರೀತಿ ಭಕ್ಷಕನಲ್ಲ, ಅನ್ನವದು.
ರಕ್ಷಕ ಪ್ರೀತಿಯ ರಾಕ್ಷಸನೆಂಬರೆ?
ನಂಬದೆ ಪ್ರೀತಿಯ ಬಿಂಬವಸು.

ಜೀವನ-ದೀಪಕೆ ಎರೆದ ಸ್ನೇಹವದಾಗಿ
ನೆರೆವುದು ಬೇರೊಂದು ಜೀವನವು
ಬತ್ತಿಯು ಬತ್ತಿಸಗೊಡದಲೆ, ಸುಡುತಿರಲು
ಬೆಳಕಿನ ಕುಡಿಯಾಗಿ ಮೆರೆಯುವದು
ಜೀವನಿಗಾಧಾರ, ಜೀವನಾಮೃತಧಾರೆ
ಪ್ರೀತಿ ಜೀವದೊಳಾರೆ ಜೀವನವೇ?
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

‘ ನಿಮ್ಮ ಜೀವನಧ್ಯೇಯ ಗೌರಿಶಂಕರದಂತೆ
ಶಿಖರವನೆತ್ತಿದೆ ಮುಗಿಲಿನೆಡೆ
ನನ್ನದೆ ತಿರುಗಿದೆ ಗಂಗೆಯು ಹರಿದಂತೆ
ಜನರೀತಿಯಂತೆಯೆ ನೆಲದ ಕಡೆ
ನಿಮ್ಮದೆ ಕರಗಿದರೆ ನನಗೆ ನೀರೆರೆವುದು
ಚಳಿಗಾಳಿ ಬಂದಂತೆ ಕಲ್ಲಾಗಲು
ನಾ ತಣ್ಣಗಾಗುತ ನಡುಗುತ ಅಡಗಲು
ಓಡುವೆ ದಿಗ್ದೇಶಕೆಲ್ಲಾದರು.’

“ ಏನಿಕೆ ! ’ ಎಂದೊಮ್ಮೆ ಸಲಿಗೆಯಲಾಡಿದ
ಸಲ್ಲಾಪ ಸರಸಗಳೆಲ್ಲಿ ಇವೆ ? ”
‘ ಯಾವುದೊ ಜನುಮದ ಕಥೆ ನೀವು ಹೇಳುವಿರಿ
ಸತ್ಯಯುಗವು ಹೋಗಿ ‘ ಕಲಿ ’ ಬಂದಿದೆ
ನಿಮ್ಮದೆ ಎತ್ತರಕೆ ನಾವೇನು ಬಂದೇವು ?
ಕಲಿತವರ ಬೆಡಗಿಲ್ಲ ನಮ್ಮ ಕಡೆ;
ನಿಮ್ಮ ಕಣ್ಮುಂದೆಯೆ ಕಣ್ಮುಚ್ಚಿದರೆ ಸಾಕು
ಗೆದ್ದೆವು ’ ಎಂದೆ ನೀ ಕಣ್ಮುಚ್ಚಿಯೆ.

ಯಾವ ಪಾತಾಳಕ್ಕೆ ಇಳಿದಿತ್ತೊ ಆ ಮಾನ
ಪಾತಾಳಗರುಡಿಗು ಹತ್ತದಿದೆ
ಸರಸ ವಿರಸವಾಗಿ ಮೌನ ನಿರಸವಾಗಿ
ಒಗಟೆಯಾಗುವ ಬಾಳು ಒಡೆಯದಿದೆ
ಝಲ್ಲೆಂದ ಹೃದಯದ ಜೊಳ್ಳು ನಾದವ ಕೇಳಿ
ಡಿಳ್ಳವಾಯಿತು ಬಾಳು ನಾನೆಂದೆನೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ !

‘ ನಿಮ್ಮ ಮಾತೇ ಬೇರೆ, ಮನ ಬೇರೆ, ಜನ ಬೇರೆ
ರಸ ರುಚಿ ಬೇರೆ, ಜೀವನ ಬೇರೆಯೆ
ನಿಮಗೆಮ್ಮ ಸಹವಾಸ ವನವಾಸದಂತೆಯೆ
ನಮ್ಮ ಹುಚ್ಚರ ಮಾತು ಹುಡುಗಾಟಿಗೆ
ಗೆಳೆಯರ ಕೂಡಾಡಿ ಬಂದಾಗ, ನಾ ನಿಮ್ಮ
ಮುಖದಲುಕ್ಕುವ ಗೆಲುವ ಕಂಡಿಲ್ಲವೆ !
ಮನೆ ಬೆಳಕು ಮುಂದಿರೆ ಆ ಕಣ್ಣು ಕುಂದಿರೆ
ನಾನೊಳಗೆ ನೊಂದಿರೆ ನೀವರಿಯಿರೆ.

ಏಕೆಂದು—ಸಾಕೆಂದು—ಬೇಕೆಂದು—ನೂಕೆಂದು—
ರಮಿಸಲಾಡಿದಿರಲ್ಲ ನಿಮ್ಮಿಷ್ಟಕ್ಕೆ
ಗಂಗೆಯು ಕಷ್ಟವು ಗೌರಿಗೆ ತಿಳಿಯದು
ಹೆಂಗಸಿನ ಕಷ್ಟವು ಗಂಡಸಿಗೆ
ಎಂದಿಗು ತಿಳಿಯದು ! ಏತಕೆ ತಿಳಿಯೋದು ?
ದುಃಖವು ನಮ್ಮದು ನಮಗೆ ಇದೆ ’
ಎಂದು ಸಿಟ್ಟುಸಿರಿಗೆ ಮಿಡಿದ ಕಂಬನಿ ಬಂದು
ಈ ಗಲ್ಲ ಸೋಕಲು ನಾ ನಡುಗಿದೆ.

‘ ತಂಪು ತಗ್ಗಿಸುತಿರಲಿ ಕಂಪು ಕಮ್ಮಯಿಸಲಿ
ಬಾಳದ ಬೇರಂತೆ ಬೇಸಿಗೆಗು
ನಿಮ್ಮ ಜೀವನದಲ್ಲಿ ಮಂಗಲವಾಗಲಿ
ಎಂದೆಂದು ’ ಕೊನೆಗೊಮ್ಮೆ ನೀನೆನ್ನಲು
ನನ್ನ ತಾಯಿಯು ನೆನೆದು ನಾ ಸುಮ್ಮನಾದೆನು
ಒಳಗೊಂದು ಹೊರಗೊಂದು ಜೀವಿಸಿದೆ.
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಅಪ್ಪನಪ್ಪನ ಹಾಗೆ ಅಪ್ಪನೆ ಅಪ್ಪಂತೆ
ಚಿಕ್ಕಪ್ಪ ನೆರವಾಗಿ ನೆಲೆಗೊಟ್ಟನು
ಮಡದಿ ಮಕ್ಕಳ ಚಿಂತೆ ತನ್ನದೆ ಇರುವಂತೆ
ನನ್ನ ಭಾರದ ಪಂಥ ತಾ ತೊಟ್ಟನು
ವಿದ್ಯೆಯ ಹಸಿವಿನ್ನೂ ನನಗೆ ಹಿಂಗಿರಲಿಲ್ಲ
ಅದಕವಕಾಶವ ನನಗಿಟ್ಟನು
'ಅಯ್ಯೊ ದೇವರೆ!' ಎಂದು ಸಂಕಟಕೆ ಕೂಗಿದ್ದೆ
ಎನಿಸಿತ್ತು ಆ ದೇವನೋಗೊಟ್ಟನು.

ಎಳೆಗೆಳೆಯರೊಡನಾಟ ಅಲ್ಲಿ ದೊರಕಿತ್ತೆನಗೆ
ಮತ್ತೊಮ್ಮೆ ಮುಂಜೊಮ್ಮೆ ನನಗಾದೊಲು
ಹರೆ ಮರಳಿ ಬಂದಂತೆ ಹುರಿದುಂಬಿತೆನ್ನೆದೆ
ಅವರ ಸಮಸ್ಯೆಗೆ ಸಮರಸನು
ನಾನಾಗೆ, ತಾನಾಗಿ ಹುಡುಗ-ಪ್ರಾಯದ ಹುಚ್ಚು
ಕನವರಿಕೆ ನನವರಿಕೆಗಳ ಕಂಡೆನು
ಅವರನುಭವದಲ್ಲಿ ನವಭವ ಪಡೆದಂತೆ
ಮೊದಲು ಕಂಡಿರದನ್ನು ನಾನುಂಡೆನು.

ಗೆಳೆತನದ ಹೊಸ ಹೊಳವು, ನನ್ನ ಕನ್ನಡ ಕುಲದ
ಕಣಸೊಂದು ಹೊಳೆದಾಡಿ ಸೆಳೆದಾಡಿತು
ಹೊಸ ಗೆಳೆಯನೊಬ್ಬನ ಎಡೆಬಿಡದ ಸಹವಾಸ
ಆ ಕಣಸ ಕನ್ನಡಿ ತೊಳೆದಾಡಿತು
ಕಣ್ಣನು ತಿದ್ದೀತು ಮುನ್ನಡೆಯೆಂದೀತು
ಮುಂದೆನ್ನುತಿರುವಾಗ ಮುಗ್ಗರಿಸಿತೇ!
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಎರಡು ವರ್ಷಗಳಂತು ಎರಡು ನಿಮಿಷಗಳಂತೆ
ಕಣ್ಣು ತೆರೆವುದರೊಳಗೆ ತಾ ಕಳೆದವು
ನೆಲೆಯಾದ ದೈವವು ತಪ್ಪಿತೊ ತಪ್ಪಿತು !
ಸಂಜೆ ಕಾವಳ ಕಣ್ಣನಣಕಿಸೀತು
ನನ್ನೆದೆಯನಿರಿದಾಡಿ ಮಿದುಳನ್ನು ಅರೆದಾಡಿ
ಜೀವನವ ನೊರೆದಾಡಿ ಬಯಲಾಯಿತು
ಮುಂದೇನು? ಎನುವಾಗ ಮುಂದೊಂದು ಕೈ ಬಂತು
ದೈವದ ಕೈಯೆಂದು ಅದ ತಿಳಿದೆನು.

ಕತ್ತಲೆಯ ಗರ್ಭದ ತೇಜದ ಕಳೆಯೊಂದು
ದಿನತುಂಬಿ ಪಡೆದಂತೆ ಆ ಬೆಳಕು
ಮುಂದಿನ ಹಗಲಿನ ಮುಂಬೆಳಕಾದಂತೆ
ಅರಳುಮೊಗ್ಗೆಯ ಅಂದದಲಿ ನಿಂದಿತು
‘ಪಾಕ ಹೊಂದಿದ ಪ್ರಕೃತಿ ಪ್ರೇಮದಿ ಪರಿಣಮಿಸಿ
ಜೀವನ ದೇವನ ಮಾಡುವುದು
ಕಲಿಕೆಯ ಮಾತಲ್ಲ, ವಾದದ ಫಲವಲ್ಲ
ಅದೃಷ್ಟವಶವಲ್ಲ, ಎದೆಯೊಲವು’

ಹೀಗೆಂದು ಹೇಳಿತು ಅವನ ನಡೆನುಡಿ ನನಗೆ
ಕತ್ತಲೆಯಲಾಯಿತು ಕೈದೀಪವು
ಮೈತ್ರಿಯ ಲೋಕದ ಮಿತ್ರನುದಯದ ಕಾಲ
ಹೊಸಬಾಳ ಬದುಕಿಗೆ ಕರೆಯುವುದು
ಕೊಂಕಣದ ಕಡಲಲ್ಲಿ ತೇಂಕಾಡಿ ಬಂದೆವು
ನಡೆ ಗೆಳತಿ, ಧೀಂಕಿಟ್ಟು ಕನ್ನಡಕೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಎಂದಿನಿಂದಲೊ ಏನೊ ಒಳಗೊಂದು ಸಖ-ಜೀವ
‘ಸಖಿ! ಬಾರೆ ಬಾ!’ ಎಂದು ಕೂಗುತಿದೆ
‘ಮುಂದಿನ ಪಥದಲಿ ಸಖಿಯಾಗು ಬಾ’ ಎಂದು
ನನ್ನ ಮನೋರಥ ನೂಗುತಿದೆ
ಬಾನಿಂದ ಬಾನಿಗೆ ಹಾಡಿನ ತಾನೊಂದು
ಸಖಿ-ಸಖಿ-ಸಖಿಯೆಂದು ತೂಗುತಿದೆ
‘ನಾನೂ ನೀನೂ ಸಖ-ಸಖಿ ಸಮ-ಸುಖಿ’
ಎಂದೆನುತ ಮುಂದಕೆ ಹೋಗುತಿದೆ.

ಅನ್ನಕೆ ಬಾಳಾಗಿ ಕಾಮಕೆ ಹೋಳಾಗಿ
ಮಾನಕೆ ಆಳಾಗಿ ಉಸಿರೆಳೆದುದು
ಬಾಳಲ್ಲ ಬದುಕಲ್ಲ; ಜೀವ ಜೀವಕೆ ಉ-
ದ್ದೀಪನವಾದುದೆ ಜೀವನವು.
ಅದು ಇದೆ ಎದೆಯಲ್ಲಿ, ಬೆಳಕಿನ ಬದಿಯಲ್ಲಿ
ರಸಗಂಗಾನದಿಯಲ್ಲಿ ಆದರುಗವು
ಹೆಸರದಕೆ ಪ್ರೀತಿಯು, ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧುಸಂಗಮು.

ಕಂಗಳು ಬಂಭ್ರಮಿಸಿ, ಹಮ್ಮುಕ್ಕಿ ಜಂಗಮಿಸಿ
ಎದೆ-ಮೊಗ ಕೆಳಗಿಳಿಸಿ ನೋಡುತಿರೆ
ಭ್ರಮರ ಭ್ರಮರಿಯನೆಳೆಸಿ, ಹಂಸ ಹಂಸಿಯ ಬಳಸಿ
ಕಮಲ ಕಮಲಿನಿಗೊಲಿದು ಬೇಡುತಿದೆ
ನಾಗದ ಸೆಳೆಮಿಂಚು, ಸಮತೆಯು ಗೆಳೆಸಂಚು
ಎಸಳಿನ ಎಳೆಯಂಚು ಎಳೆದೀತೆನೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಒಲ್ಲೆ ಒಲ್ಲೆಂದರು ಲಲ್ಲೆಯ ಮಾತಿವು
ಲಾಲಿತ್ಯವನುಸರಿಸಿ ಎಲೆ ಲಲನೆ!
ದೇಸಿಯ ನುಡಿಗೊಪ್ಪು ದೇಸಿಯ ಛಂದದಿ
ನವನಾಗಬಂಧದಿ ಇವು ಬಿಗಿದಿವೆ
ನೇತಿಯೆನ್ನುವ ಪ್ರೀತಿ ನೀತಿಯ ಧ್ವನಿದೋರಿ
ಸ್ವಾತಂತ್ರ್ಯವನು ಬೀರಿ ಹರಿದಾಡಿದೆ
ಮನದ ಚಾಂಚಲ್ಯದ ಸಂಚಾರ ಚಿತ್ರದ
ಸ್ಥಾಯಿಗೆ ರಸಭಾವಗಳನೆರೆದಿದೆ.

ಗರತಿಯರೆದೆಮಾತು, ನೆರೆಮಾತುಗಳ ಬೆರೆತು
ಲಾವಣಿಯಲಂಕಾರದಲಿ ಹೊಂದಿದೆ
ಪಂಡಿತ ಪಾಮರರಿಬ್ಬರ ನಾಲಿಗೆ-
ಯೊಳು ಒಡಂಬಡುವಂತೆ ರಂಜಿಸಿದೆ
ನುಡಿನುಡಿಗು ರಸ ಒಸರಿ, ರಸಗಬ್ಬಿಗಿದು ಸರಿ
ನುರಿಸಿ ಹೀರಲು ನೀರು ಏರುತಿದೆ
ಪ್ರೇಮರಸಾಯನ, ಹೃದಯಕಮೃತ-ಪಾನ
ಜೀವಕಾಪ್ಯಾಯನವಾಗುತಿದೆ.

ಚಿತ್ತದ ಸೂತ್ರಕೆ ಬುದ್ಧಿಯ ಹುರಿಹಾಕಿ
ಹಮ್ಮಿನ ಮುರಿಹಾಕಿ ಮನ ಹೆಣೆದಿರೆ
ಅಂತಃಕರಣದ ಗೋಪು ಭಾವದ ಕೋಪು
ಎಲ್ಲರ ಕೊರಳೆದೆ ಸಿಂಗರಿಸಿದೆ
ಏಕಾಂತದ ಜಿನುಗು ಲೋಕಾಂತಕೆಳೆಯಿತು
ಜನವು ಜನಾರ್ದನನೆಂದರಿತೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

ಅಕ್ಕರ ಛಂದವು ಸಾಂಗತ್ಯ-ಸಂಸ್ಕಾರ
ಹೊಂದಿಲ್ಲಿ ಬಂದಿದೆ ಹೊಸಹೊಸದು
ಅಕ್ಕರೆಯದಾಯಿತು ಅಕ್ಕರಿಗರಿಗೆಲ್ಲ
ಅಕ್ಕುಮಿಕ್ಕೆನುವಂತೆ ಕೊನೆವರೆಗು
ಅಕ್ಕರತೆ ಗೆಳೆತನ ಪ್ರೀತಿ ಪ್ರಣಯವಿಧಾನ
ಸಿಡುಕು ಮಿಡುಕಿನ ದುಃಖ ದುಗುಡಗಳೆ
ಹುರಿಯಾಗಿ ಎಳೆಯಾಗಿ ನೂರರ ನೂಲಾಗಿ
ಧಾರೆಗೆಡದೆ ಹರಿಯದೆ ಮುಗಿದಿದೆ.

ಗೆಳೆಯ-ದಂಪತಿಗಳು ರಾಸನೃತ್ಯಕೆ ನೆರೆದು
ಗೆಜ್ಜೆಗೋಲುಗಳಿಂದ ತಾಳದಲಿ
ತೊಳಲುಗೊಡುತಲಿರೆ ಕೊಳಲ ಜೋಡಿಯು ಜತೆಗೆ
ದನಿಮೇಳದಲಿ ಸವಿದನಿಗೂಡಿಸಿ
ಬೆಳದಿಂಗಳಿರುಳಲಿ ಗಮಕದ ತಿರುಳಲಿ
ಯಮಕದ ಯತಿದೋರಿ ಪಡಿನುಡಿದು
ಕುಣಿತದ ಹಾಡಿದು ಕುಣಿಯಹಚ್ಚಿತು ಜನಕೆ
ಕಲ್ಲಾದ ಮನಗಳ ಕರಗಿಸಿತು.

ಅಂಬಿಕಾತನಯನ ಜಂಭದ ಪಾಡಳಿದು
ನಂಬಿಕೆಯು ಹಾಡಾಗಿ ಬಂತಿಲ್ಲಿಗೆ
ಪೂರ್ವಾನುರಾಗವೀ ಪರ್ವಕೆ ಸಂದಿತು
'ಉತ್ತರೋತ್ತರವಿರಲಿ ಉತ್ತರಕೆ!
ಕಲ್ಯಾಣ-ಶಕ್ತಿಯ ಕೈಯ್ಯ ಕುಶಲತೆಯಿಂದ
ಪಾಕವಾಗಲಿ ಪ್ರೇಮ!' ಎನ್ನುವೆನೇ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!



ಮನೋಹರ ಗ್ರಂಥ ಪ್ರಕಾಶನ ಸಮಿತಿ — ಧಾರವಾಡ.